# ಜನತಾವಾಣಿ


ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ ಸೋಮವಾರ, ಮಾರ್ಚ್ 28, 2022

ಸಂಪುಟ : 48 ಸಂಚಿಕೆ : 317 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


## ರೇಣುಕಾಚಾರ್ಯರ ಜಯಂತಿ ಬೇಡ ರೇವಣಸಿದ್ದೇಶ್ವರ ಜಯಂತಿ ಮಾಡಿ



**ರಾಜ್ಯ ಸರ್ಕಾರದ ಆದೇಶವನ್ನು ಹಿಂಪಡೆಯಲು ಕಾಗಿನೆಲೆ ಶ್ರೀಗಳ ಆಗ್ರಹ**

ಮಲೇಬೆನ್ನೂರು, ಮಾ.27- ರಾಜ್ಯ ಸರ್ಕಾರ ಘೋಷಿಸಿರುವ ಶ್ರೀ ರೇಣುಕಾಚಾರ್ಯರ ಜಯಂತಿ ಆದೇಶವನ್ನು ಕೂಡಲೇ ಹಿಂಪಡೆಯಬೇಕು ಎಂದು ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಆಗ್ರಹಿಸಿದರು.

ಬೆಳ್ಳೂಡಿ ಶಾಖಾಮಠದಲ್ಲಿ ಇಂದು ಹಮ್ಮಿಕೊಂಡಿದ್ದ ಶ್ರೀಮಠದ 6ನೇ ವಾರ್ಷಿಕೋತ್ಸವ ಮತ್ತು ಶ್ರೀ ಕನಕ ಜಯಂತ್ಯೋತ್ಸವ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಶ್ರೀ ರೇಣುಕಾಚಾರ್ಯರಿಗಿಂಥ ಆದಿ ಜಗದ್ಗುರು ಶ್ರೀ ರೇವಣಸಿದ್ಧೇಶ್ವರರು ಮೂಲ ಪುರುಷರಾಗಿರುವುದರಿಂದ, ಶ್ರೀ ರೇಣುಕಾಚಾರ್ಯರ ಜಯಂತಿ ಬದಲಾಗಿ ಅದೇ ದಿನದಂದು 'ಶ್ರೀ ರೇವಣಸಿದ್ಧೇಶ್ವರ ಜಯಂತಿ' ಎಂದು ಘೋಷಿಸಬೇಕು ಎಂದು ಸ್ವಾಮೀಜಿ ಅವರು ಮನವಿ ಪತ್ರದ ಮೂಲಕ ರಾಜ್ಯ ಸರ್ಕಾರವನ್ನು ಕೋರಿದರು. ವಾಸ್ತವದಲ್ಲಿ ರೇಣುಕಾಚಾರ್ಯ ಎಂಬ ವ್ಯಕ್ತಿಯೇ ಇಲ್ಲ, ಈ ಬಗ್ಗೆ ಅನೇಕ ಶಾಸನಗಳಲ್ಲಿ ಉಲ್ಲೇಖಿತವಾಗಿದ್ದು, ಶ್ರೀ ರೇವಣಸಿದ್ಧರನ್ನೇ ಆದಿ ರೇಣುಕ, ರೇಣುಕ, ರೇಣುಕಾಚಾರ್ಯ, ರೇಣುಕಾರಾಧ್ಯ ಇನ್ನೂ ಮುಂತಾದ ಕಲ್ಪಿತ, ಪೌರಾಣಿಕ ನಾಮಗಳನ್ನು ಸೃಷ್ಟಿಸಿ, ಹಾಲುಮತದ ಕುಲಗುರು, ಆದಿ (2ನೇ ಪುಟಕ್ಕೆ)

## ಪೂನಾ - ಬೆಂಗಳೂರಿಗೆ ಹೊಸ ರಾಷ್ಟ್ರೀಯ ಹೆದ್ದಾರಿ

## 40 ಸಾವಿರ ಕೋಟಿ ರೂ. ವೆಚ್ಚದಲ್ಲಿ 699 ಕಿ.ಮೀ. ಹೆದ್ದಾರಿ ನಿರ್ಮಾಣ : ಗಡ್ಕರಿ



ಮುಂಬೈ, ಮಾ. 27 – ಬೆಂಗಳೂರು ಹಾಗೂ ಪುಣೆ ಸಂಪರ್ಕಿಸುವ ಹೊಸ 699 ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿ ನಿರ್ಮಿಸಲಾಗುವುದು ಎಂದು ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಪ್ರಸಕ್ತ ಪುಣೆ - ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 775 ಕಿ.ಮೀ. ಉದ್ದವಿದೆ. ಆದರೆ, ಈ ಹೆದ್ದಾರಿಯ ಕೆಲ ಭಾಗ ಮಳೆಗಾಲದಲ್ಲಿ ಮುಳುಗುತ್ತದೆ. ಈ ಹಿನ್ನೆಲೆಯಲ್ಲಿ ಯಾವುದೇ ಸಂದರ್ಭದಲ್ಲಿ ಪ್ರವಾಹಕ್ಕೆ ಸಿಲುಕದ ರೀತಿಯಲ್ಲಿ ಹೊಸ ಹೆದ್ದಾರಿ ನಿರ್ಮಿಸಲಾಗುವುದು ಎಂದು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಆಯೋಜಿಸಲಾಗಿದ್ದ ಸಮಾವೇಶದಲ್ಲಿ ಮಾತನಾಡುತ್ತಿದ್ದ ಗಡ್ಕರಿ ತಿಳಿಸಿದ್ದಾರೆ.

ಹೊಸ ಹೆದ್ದಾರಿಯು ಮಹಾರಾಷ್ಟ್ರದ ಸತಾರಾ ಮತ್ತು ಸಾಂಗ್ಲಿ ಜಿಲ್ಲೆಗಳಲ್ಲಿ ಸಾಗಿ, ಕರ್ನಾಟಕದ ಬೆಳಗಾವಿ, ಬಾಗಲಕೋಟೆ, ಗದಗ, ಕೊಪ್ಪಳ, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ತುಮಕೂರು ಮೂಲಕ ಸಾಗಿ ಬೆಂಗಳೂರಿಗೆ ತಲುಪಲಿದೆ ಎಂದು ಗಡ್ಕರಿ ಹೇಳಿದ್ದಾರೆ.

ಹೊಸ ಹೆದ್ದಾರಿಯನ್ನು 40 ಸಾವಿರ ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗುವುದು. ಈ ಹೆದ್ದಾರಿಯಿಂದ ಮಹಾರಾಷ್ಟ್ರದ ಹಿಂದುಳಿದ ಪ್ರದೇಶಗಳಾದ ಖಂಡಾಲ, ಫಲ್ಟನ್, ಖಟಾವೋ, ಖಾನಾಪುರ, ಟಸ್ಗಾಂವ್ ಮತ್ತಿತರೆ ಪ್ರದೇಶಗಳ ಅಭಿವೃದ್ಧಿಯಾಗಲಿದೆ ಎಂದವರು ಹೇಳಿದ್ದಾರೆ.

ಈಗಿರುವ ಹೆದ್ದಾರಿಗೆ ಸಮಾನಾಂತರವಾಗಿ ಹೊಸ ಹೆದ್ದಾರಿ ನಿರ್ಮಾಣವಾಗಲಿದೆ. ಎರಡೂ ಹೆದ್ದಾರಿಗಳ ನಡುವೆ ಸಂಪರ್ಕ ಉತ್ತಮವಾಗಿರಲಿದೆ. ಹೊಸ ಮಾರ್ಗದಿಂದಾಗಿ ಈಗಿರುವ ಮಾರ್ಗದ ಮೇಲಿನ ಒತ್ತಡ ಕಡಿಮೆಯಾಗಲಿದೆ ಎಂದವರು ತಿಳಿಸಿದ್ದಾರೆ.

## ರಸ್ತೆ ಅಪಘಾತದಲ್ಲಿ ನಗರದ ಇಬ್ಬರು ನಾಟಕ ಕಲಾವಿದೆಯರ ಸಾವು



ರಾಣೇಬೆನ್ನೂರ,ಮಾ.27- ರಸ್ತೆ ಅಪಘಾತದಲ್ಲಿ ಇಬ್ಬರು ವೃತ್ತಿ ರಂಗಭೂಮಿಯ ಕಲಾವಿದೆಯರು ಸಾವಿಗೀಡಾದ ಘಟನೆ ತಾಲ್ಲೂಕಿನ ಕಾಕೋಳ ಹತ್ತಿರದ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾನುವಾರ ನಡೆದಿದೆ.

ದಾವಣಗೆರೆಯ ನಾಟಕ ಕಲಾವಿದೆಯರಾದ ಗೀತಾ (35) ಹಾಗೂ ಮಂಜುಳಾ (35) ಮೃತಪಟ್ಟಿದ್ದು, ಇನ್ನೋರ್ವ ಕಲಾವಿದೆ ಕಾವ್ಯ ತೀವ್ರ ಗಾಯಗೊಂಡಿದ್ದಾರೆ. ಕಾರು ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದಾನೆ.

ಮೃತರು ಕಾರಿನಲ್ಲಿ ಅಂಕೋಲಾ ನಗರಕ್ಕೆ ನಾಟಕವಾಡಲು ಹೋಗುತ್ತಿದ್ದ ವೇಳೆ ಕಾಕೋಳ ಹತ್ತಿರದಲ್ಲಿ ಮುಂದೆ ತೆರಳುತ್ತಿದ್ದ ಲಾರಿಯೊಂದಕ್ಕೆ ಡಿಕ್ಕಿ ಹೊಡೆದ ಪರಿಣಾಮ ಈ ದುರ್ಘಟನೆ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಸಿದ್ದು ಹೇಳಿಕೆ ತಿರುಚಿ, ಹಿಂದೂ ಧರ್ಮಾಧಿಕಾರಿಗಳಿಗೆ ಬಿಜೆಪಿ ಅಗೌರವ



ಚಿತ್ರದುರ್ಗ, ಮಾ.27 - ನಮ್ಮ ತಾಯಂದಿರು, ಮಠಾಧೀಶರು, ವಿವಿಧ ಧರ್ಮದ ಜನರು ತಲೆ ಮೇಲೆ ಹಾಕುವ ಬಟ್ಟೆ (ದುಪ್ಪಟ) ಗೌರವದ ಸೂಚಕ ಎಂದು ಸಿದ್ದರಾಮಯ್ಯ ಹೇಳಿದ್ದ ಮಾತನ್ನು ತಿರುಚುವ ಕೆಲಸ ಬಿಜೆಪಿ ಮಾಡುತ್ತಿದೆ ಎಂದು ಮಾಜಿ ಸಚಿವ ಹೆಚ್. (2ನೇ ಪುಟಕ್ಕೆ)

## ಪೆಟ್ರೋಲ್, ಡೀಸೆಲ್ ಐದನೇ ಬಾರಿ ಹೆಚ್ಚಳ

ನವದೆಹಲಿ, ಮಾ. 27- ಭಾನುವಾರ ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 50 ಪೈಸೆ ಹಾಗೂ ಡೀಸೆಲ್ ಬೆಲೆಯನ್ನು 55 ಪೈಸೆ ಹೆಚ್ಚಿಸಲಾಗಿದೆ. ಕಳೆದ ಆರು ದಿನಗಳಲ್ಲಿ ಐದು ಬಾರಿ ತೈಲ ಬೆಲೆ ಹೆಚ್ಚಿಸಲಾಗಿದೆ. ಸ್ಥಳೀಯ ತೆರಿಗೆಗಳಿಗೆ ಅನುಗುಣವಾಗಿ ತೈಲ ದರ ಹೆಚ್ಚಳದಲ್ಲಿ ವ್ಯತ್ಯಾಸವಾಗಲಿದೆ.

## ಬೀದಿ ಮಕ್ಕಳನ್ನು ಗುರುತಿಸುವಲ್ಲಿ ಹಿಂದೆ ಬಿದ್ದ ರಾಜ್ಯಗಳು

ನವದೆಹಲಿ, ಮಾ. 27- ದೇಶದ 15-20 ಲಕ್ಷ ಮಕ್ಕಳು ಬೀದಿಯಲ್ಲಿದ್ದಾರೆ. ಆದರೂ, ಕೆಲ ರಾಜ್ಯ ಸರ್ಕಾರಗಳ ವರ್ತನೆಯಿಂದಾಗಿ ಈ ಮಕ್ಕಳನ್ನು ಗುರುತಿಸಿ, ಪುನರ್ವಸತಿ ಕಲ್ಪಿಸಲು ಸಾಧ್ಯವಾಗುತ್ತಿಲ್ಲ ಎಂದು ಎನ್.ಸಿ.ಪಿ.ಸಿ.ಆರ್. ಮುಖ್ಯಸ್ಥ ಪ್ರಿಯಾಂಕ್ ಕಣುಂಗೊ ಹೇಳಿದ್ದಾರೆ.

ಖಾಸಗಿ ಸುದ್ದಿ ಸಂಸ್ಥೆಯೊಂದಿಗೆ ಮಾತನಾಡಿರುವ ಅವರು, ಬೀದಿ ಮಕ್ಕಳ ಮಾಹಿತಿ ಸಂಗ್ರಹಿಸಲು ಬಾಲ ಸ್ವರಾಜ್ ವೆಬ್ ಪೋರ್ಟಲ್ ರೂಪಿಸಲಾಗಿದೆ. ಈ ತಾಣದಲ್ಲಿ ಮಕ್ಕಳ ವಿವರಗಳನ್ನು ದಾಖಲಿಸಿನೆರವು (2ನೇ ಪುಟಕ್ಕೆ)

# ಸಭ್ಯ ಸಮಾಜ ನಿರ್ಮಾಣಕ್ಕೆ ಲೇಖನಿ ಎತ್ತಿ

## ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ನುಡಿಗಳನ್ನಾಡಿದ ಡಾ.ಶಂಭು ಬಳಿಗಾರ



ದಾವಣಗೆರೆ, ಮಾ. 27- ಸಭ್ಯ ಸಮಾಜ ನಿರ್ಮಾಣಕ್ಕಾಗಿ ಯುವಕರು ಲೇಖನಿ ಎತ್ತಬೇಕಾಗಿರುವುದು ಇಂದಿನ ಅಗತ್ಯವಾಗಿದೆ ಎಂದು ಇಳಕಲ್ಲು ವಿಶ್ರಾಂತ ಪ್ರಾಚಾರ್ಯ ಡಾ. ಶಂಭು ಬಳಿಗಾರ ಹೇಳಿದರು.

ಸಮೀಪದ ಎಲೆಬೇತೂರಿನ ಮಾಗಾನಹಳ್ಳಿ ಅಂಬಾಸಪ್ಪನವರ ಮೈದಾನದಲ್ಲಿ ಆಯೋಜಿಸಲಾಗಿದ್ದ 11ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರು ಸಮಾರೋಪ ನುಡಿಗಳನ್ನಾಡಿದರು.

ಯುವಕರಿಗೆ ಕನ್ನಡ ಸಾಹಿತ್ಯ ಪರಂಪರೆಯ ಅರಿವಿರಬೇಕು. ಜೀವನದ ಮೌಲ್ಯ, ನೆಲದ ಸಂಸ್ಕೃತಿಯ ಬಗ್ಗೆ ಅರಿವಿಲ್ಲದ ಬರವಣಿಗೆ ಅನಾಹುತಕ್ಕೆ ಕಾರಣವಾಗುತ್ತದೆ ಎಂದೂ ಸಹ ಅವರು ಇದೇ ವೇಳೆ ಎಚ್ಚರಿಸಿದರು.

ನಮ್ಮ ಸಂಸ್ಕೃತಿ, ಮಣ್ಣಿನ ಗುಣಗಳು ಲೇಖನಿ ಮೂಲಕ ಮುಂದಿನ ಪೀಳಿಗೆಗೆ ತಲುಪಬೇಕು. ಆ ಮೂಲಕ ಅವರು ಸಮಾಜದಲ್ಲಿ ಸಭ್ಯರಾಗಿ ಬಾಳುವಂತಾಗಲಿ ಎಂದು ಆಶಿಸಿದರು.

ಸುಖ, ಸಮೃದ್ಧಿಯ ಜೀವನ ನಡೆಸುತ್ತಿದ್ದ ನಾವು ಇಂದು ಯಾವ ಸ್ಥಿತಿಗೆ ತಲುಪಿದ್ದೇವೆ ಎಂಬುದನ್ನು ಪ್ರಶ್ನಿಸಿಕೊಳ್ಳಬೇಕಿದೆ. ಹಳ್ಳಿಗಳ ಮನೆಗಳಲ್ಲಿ ಅರ್ಧ ಜನರಿದ್ದರೆ, ಅರ್ಧ ದನಗಳಿರುತ್ತಿದ್ದವು. ಪಡಸಾಲೆಯಲ್ಲಿ ಕಾಳು-ಕಡಿ ತುಂಬಿರುತ್ತಿದ್ದವು. ಉತ್ಕೃಷ್ಟ (2ನೇ ಪುಟಕ್ಕೆ)

## ಮಹಿಳಾ ಸಾಹಿತ್ಯದ ಅವಹೇಳನ ಬೇಡ



ದಾವಣಗೆರೆ, ಮಾ. 27- ಮಹಿಳೆಯರ ಸಾಹಿತ್ಯಕ್ಕೆ ಅಡುಗೆ ಮನೆಯ ಸಾಹಿತ್ಯ, ಎರಡನೇ ದರ್ಜೆ ಸಾಹಿತ್ಯ ಎಂದು ಅವಹೇಳನ ಮಾಡಬೇಡಿ ಎಂದು 11ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಜಿ.ಎಸ್. ಸುಶೀಲಾದೇವಿ ಆರ್.ರಾವ್ ಹೇಳಿದರು.

ಸಮಾರೋಪ ಸಮಾರಂಭದಲ್ಲಿ ಅವರು ಸಮ್ಮೇಳನಾಧ್ಯಕ್ಷರ ನುಡಿಗಳನ್ನಾಡುತ್ತಾ, ಇಂದಿಗೂ ಮಹಿಳೆ ಅನೇಕ ಕಷ್ಟ, ನೋವು ಅನುಭವಿಸುತ್ತಿದ್ದಾಳೆ. ಅನೇಕ ಕಟ್ಟುಪಾಡುಗಳಿವೆ. ಅವೆಲ್ಲವನ್ನೂ ಮೀರಿ ಸಾಹಿತ್ಯ ರಚಿಸುವುದು ಸುಲಭದ ಮಾತಲ್ಲ ಎಂದರು.

ಪುರುಷರು ತಮಗನಿಸಿದ್ದನ್ನು ನಿರ್ಭೀಡೆಯಿಂದ ಹೇಳಬಹುದು. ಆದರೆ ಮಹಿಳೆ ಮಾತನಾಡಿದರೆ ಅವಳ ಚಾರಿತ್ರ್ಯವಧೆ ಮಾಡಲಾಗುತ್ತದೆ ಎಂದ ಅವರು, ಇಂದಿನ ಮಹಿಳಾ ಸಾಹಿತ್ಯದ ಬಗ್ಗೆ ಅಪಾರ ಹೆಮ್ಮೆ ಇದೆ ಎಂದರು. ಸಮ್ಮೇಳನಾಧ್ಯಕ್ಷರನ್ನಾಗಿಸಿ ನೀವು ನೀಡಿದ ಗೌರವ ಕೇವಲ ನನಗಲ್ಲ. ಮಹಿಳಾ ಸಾಹಿತ್ಯ ಹಾಗೂ ಮಹಿಳಾ ಸಾಹಿತಿಗಳಿಗೆ ನೀಡಿದ ಗೌರವ ಎಂದು ಬಣ್ಣಿಸಿದ ಅವರು, ಊಟದ ವ್ಯವಸ್ಥೆಯೂ ಸೇರಿ ಸಮ್ಮೇಳನವನ್ನು ಅಚ್ಚುಕಟ್ಟಾಗಿ, ಯಶಸ್ವಿಯಾಗಿ ನಡೆಸಿಕೊಟ್ಟಿದ್ದಕ್ಕೆ ಎಲೆಬೇತೂರು ಗ್ರಾಮಸ್ಥರಿಗೆ ಧನ್ಯವಾದ ಅರ್ಪಿಸಿದರು.

## ಕೊರೊನಾದ ಕರೆ ಸಂದೇಶಕ್ಕೆ ತೆರೆ ಸಾಧ್ಯತೆ

ನವದೆಹಲಿ, ಮಾ. 27 – ದೂರವಾಣಿ ಕರೆ ಮಾಡಿದಾಗ ಕೊರೊನಾ ಕುರಿತು ಅರಿವು ಮೂಡಿಸುವ ಸಂದೇಶಗಳನ್ನು ಕೇಳುವುದು ಶೀಘ್ರದಲ್ಲೇ ಅಂತ್ಯವಾಗುವ ಸಾಧ್ಯತೆ ಇದೆ.

ಎರಡು ವರ್ಷಗಳ ಹಿಂದೆ ದೂರವಾಣಿ ಕರೆ ಮಾಡಿದಾಗ ಕಾಲರ್‌ಟ್ಯೂನ್ ರೂಪದಲ್ಲಿ ಹಾಗೂ ಪೂರ್ವ ದಾಖಲಿತ ಸಂದೇಶದ ರೀತಿಯಲ್ಲಿ ಕೊರೊನಾ ಕುರಿತು ಅರಿವು ಮೂಡಿಸಲಾಗುತ್ತಿತ್ತು. ಪದೇ ಪದೇ ಅದೇ ಮಾತುಗಳನ್ನು ಕೇಳಿದ್ದ ನಾಗರಿಕರು ಅಸಮಾಧಾನ ವ್ಯಕ್ತಪಡಿಸಿದ್ದಲ್ಲದೇ, ತುರ್ತು ಕರೆ ಸಂದರ್ಭದಲ್ಲಿ ಸಮಸ್ಯೆಗಳಾದ (2ನೇ ಪುಟಕ್ಕೆ)


**6ನೇ ವರ್ಷದ ಪುಣ್ಯಸ್ಮರಣೆ**



**ಶ್ರೀಮತಿ ಡಿ.ಟಿ. ಪಾರ್ವತಮ್ಮನವರು**

(ಡಿ. ತೀರ್ಥಲಿಂಗಪ್ಪನವರ ಧರ್ಮಪತ್ನಿ)

ನಿಧನ : 28ನೇ ಮಾರ್ಚ್ 2016

ನಿಮ್ಮ ಒಡನಾಟದ ಸವಿನೆನಪುಗಳೇ...
ನಮ್ಮೀ ಬಾಳಿನ ಜೀವಾಳ....

ಸದಾ ನಿಮ್ಮ ನೆನಪಿನಲ್ಲಿ ಕುಟುಂಬ ವರ್ಗದವರು

ಫೋ. : 95381 42582, 97424 37766








॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆಯ ಆಹ್ವಾನ ಪತ್ರಿಕೆ**



ಜನನ: 10.04.1939

ಮರಣ: 24.03.2022

ದಾವಣಗೆರೆ ರಂಗನಾಥ ಬಡಾವಣೆ ವಾಸಿ ಶ್ರೀ ಬಿ.ಎಸ್. ರೇವಣಸಿದ್ದಯ್ಯ ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 24.03.2022ರ ಗುರುವಾರ ಬೆಳಿಗ್ಗೆ 10.45ಕ್ಕೆ ನನ್ನ ಧರ್ಮಪತ್ನಿಯಾದ

**ಶ್ರೀಮತಿ ಕೆ. ರುದ್ರಮ್ಮನವರು**

ಶಿವಾಧೀನರಾದ ಪ್ರಯುಕ್ತ ಲಿಂಗೈಕ್ಯರ ಆತ್ಮಶಾಂತಿಗಾಗಿ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 28.03.2022ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ರಂಗನಾಥ ಬಡಾವಣೆ #1675/63, 17ನೇ ಮೇನ್, 6ನೇ ಕ್ರಾಸ್‌ನಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು - ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: ಶ್ರೀ ಬಿ.ಎಸ್. ರೇವಣಸಿದ್ದಯ್ಯ ಮತ್ತು ಮಕ್ಕಳಾದ
ಶ್ರೀಮತಿ ಮಮತ ಶ್ರೀ ಆರ್.ಕೆ. ಸ್ವಾಮಿ (ಅಜ್ಜಣ್ಣ) ಮತ್ತು ಮಕ್ಕಳು
ಶ್ರೀ ನಾಗರತ್ನ ಶ್ರೀ ಬಿ.ಆರ್. ಸಿದ್ದೇಶ್ ಮತ್ತು ಮಕ್ಕಳು
ಭೈರಪ್ಪರ ವಂಶಸ್ಥರು, ಸಿರಿಗೆರೆ, ಚಿತ್ರದುರ್ಗ ತಾ॥ ಹಾಗೂ ಬಂಧು-ಮಿತ್ರರು.
ಶ್ರೀ ಶಿವಲಿಂಗೇಶ್ವರ ಟ್ರೇಡರ್ಸ್, ಎ.ಪಿ.ಎಂ.ಸಿ. 'ಡಿ' ಬ್ಲಾಕ್ ದಾವಣಗೆರೆ.
ಮೊ: 94483 23906, 94484 23623

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.






**ವಾಣಿ ಹೋಂಡಾ**

Head Office : ಪಿ.ಬಿ.ರೋಡ್, ದಾವಣಗೆರೆ. ಫೋನ್: 08192-231677, ಮೊ: 97312 33378.
(ASC) ನಂದಿ ಪೆಟ್ರೋಲ್ ಬಂಕ್ ಎದುರು, ಪಿ.ಬಿ.ರಸ್ತೆ, ದಾವಣಗೆರೆ. ಫೋನ್: 87222 76197
Branches : ವಾಣಿ ಹೋಂಡಾ, ಹರಿಹರ ಮೊ: 98868 10179, ಹೊನ್ನಾಳಿ ಮೊ: 98454 37634, ಚನ್ನಗಿರಿ ಮೊ: 98447 57555, ಮಲೇಬೆನ್ನೂರು (ASC) ಮೊ: 98866 18484, ತ್ಯಾವಣಗಿ (ASC) ಮೊ: 80734 00724, ಸಾಸ್ವೆಹಳ್ಳಿ (FO) ಮೊ: 97408 94560

# ಸಭ್ಯ ಸಮಾಜ ನಿರ್ಮಾಣಕ್ಕೆ ಲೇಖನಿ ಎತ್ತಿ




## ಸಮ್ಮೇಳನದ ನವ ನಿರ್ಣಯಗಳು

ಸಮೀಪದ ಎಲೆಬೇತೂರಿನ ಮಾಗಾನಹಳ್ಳಿ ಅಂಬಾಸಪ್ಪನವರ ಮೈದಾನದಲ್ಲಿ ಆಯೋಜಿಸಲಾಗಿದ್ದ 11ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 9 ನಿರ್ಣಯಗಳನ್ನು ಕೈಗೊಳ್ಳಲಾಗಿದೆ.

1. ಮುಂದಿನ ವಿಶ್ವ ಕನ್ನಡ ಸಮ್ಮೇಳನವನ್ನು ದಾವಣಗೆರೆಯಲ್ಲೇ ನಡೆಸಬೇಕು. 2. ದಾವಣಗೆರೆಯಲ್ಲಿ ಎಫ್ ಎಂ ರೇಡಿಯೋ ಕೇಂದ್ರ ಆರಂಭಿಸಬೇಕು. 3. ಕನ್ನಡವನ್ನು ಅನ್ನದ ಭಾಷೆಯನ್ನಾಗಿ ಮಾಡುವ ದೃಷ್ಟಿಯಿಂದ ಯುವಕರಿಗೆ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಬೇಕು. ಈ ನಿಟ್ಟಿನಲ್ಲಿ ದಾವಣಗೆರೆ ಜಿಲ್ಲೆಯಲ್ಲಿ ಕೈಗಾರಿಕೆಗಳ ಸ್ಥಾಪನೆ ಹಾಗೂ ಸಿದ್ಧ ಉಡುಪುಗಳ ತಯಾರಿಕೆಗೆ ವಿಶೇಷ ಆರ್ಥಿಕ ವಲಯ, ತಂತ್ರಜ್ಞಾನ ಪಾರ್ಕುಗಳ ಸ್ಥಾಪನೆಗೆ ಅವಕಾಶ ಕಲ್ಪಿಸಬೇಕು.

4. ನಾಡಿನ ಮಧ್ಯ ಭಾಗದಲ್ಲಿರುವ ದಾವಣಗೆರೆಯಲ್ಲಿ ಪೂರ್ಣ ಪ್ರಮಾಣದ ವಿಮಾನ ನಿಲ್ದಾಣ ನಿರ್ಮಿಸುವ ಮೂಲಕ ಶಿಕ್ಷಣ ಮತ್ತು ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವುದು. 5. ಕೃಷಿ ಪ್ರಧಾನವಾಗಿರುವ ದಾವಣಗೆರೆ ಜಿಲ್ಲೆಯಲ್ಲಿ ಭತ್ತ, ರಾಗಿ, ಜೋಳ, ಅಡಕೆ, ಬಾಳೆ ಮುಂತಾದ ಬೆಳೆಗಳಿಗೆ ಪೂರಕವಾಗಿ ಸಂಶೋಧನೆಗೆ ಗುಣವಾಗುವಂತೆ ಕೃಷಿ ಮತ್ತು ತೋಟಗಾರಿಕೆ ಕಾಲೇಜು ಸ್ಥಾಪನೆಗೆ ಕ್ರಮ ವಹಿಸಬೇಕು. 6. ನಾಡಿನ ಯಾವುದೇ ಕನ್ನಡ ಶಾಲೆಗಳನ್ನು ಮುಚ್ಚಬಾರದು ಹಾಗೂ ಕನ್ನಡ ಶಾಲೆಗಳ ಅಭಿವೃದ್ಧಿಗೆ ಮತ್ತು ಮೂಲ ಸೌಕರ್ಯಗಳಿಗೆ ಹೆಚ್ಚಿನ ಅನುದಾನ ನೀಡಬೇಕು. 7. ಕನ್ನಡ ನಾಡಿನ ಪ್ರತಿ ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಬೇಕು.

8. ಐತಿಹಾಸಿಕ ಹಿನ್ನೆಲೆ ಹೊಂದಿರುವ ಎಲೆಬೇತೂರಿನ ಶ್ರೀ ಕಲ್ಲೇಶ್ವರ ದೇವಸ್ಥಾನವನ್ನು ಜೀರ್ಣೋದ್ಧಾರಗೊಳಿಸಿ ಪ್ರವಾಸೋದ್ಯಮ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಬೇಕು. ಹಾಗೂ ಗ್ರಾಮದಲ್ಲಿರುವ ಶಿಲಾ ಶಾಸನಗಳ ಸಂಗ್ರಹ ಮತ್ತು ಸಂರಕ್ಷಣೆ ಆಗಬೇಕು. 9. ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳನ್ನು ನಗರ ಪ್ರದೇಶಗಳಿಗೆ ಸೀಮಿತಗೊಳಿಸದೆ ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸುವುದು. ಸಂಜೆ ನಡೆದ ಬಹಿರಂಗ ಅಧಿವೇಶನದಲ್ಲಿ ಜಿಲ್ಲಾ ಕಸಾಪ ಕೋಶಾಧ್ಯಕ್ಷ ಕೆ. ರಾಘುವೇಂದ್ರ ನಾಯರಿ ನಿರ್ಣಯ ಮಂಡಿಸಿದರು.

**(1ನೇ ಪುಟದಿಂದ)** ಆಹಾರ ಸೇವಿಸುತ್ತಾ ಸುಖವಾಗಿದ್ದ ರೈತರ ಮನೆಗಳಲ್ಲೀಗ ಆಕಳು-ಎಮ್ಮೆ ಮರೆಯಾಗಿವೆ. ಎತ್ತುಗಳ ಜಾಗವನ್ನು ಟ್ರ್ಯಾಕ್ಟರ್‌ಗಳು ಆಕ್ರಮಿಸಿವೆ. ದನಗಳಿಲ್ಲದೆ, ಗೊಬ್ಬರ ಇಲ್ಲ. ರಾಸಾಯನಿಕ ಗೊಬ್ಬರಗಳಿಂದಾಗಿ ಭೂಮಿ ಬರಡಾಗುವ ಹಂತಕ್ಕೆ ತಲುಪಿದೆ. ಸ್ವಾವಲಂಬಿಗಳಾಗಿದ್ದವರು ನಮ್ಮ ಅಸ್ಮಿತೆ, ನಮ್ಮತನವನ್ನೇ ಕಳೆದುಕೊಳ್ಳುವಷ್ಟರ ಮಟ್ಟಿಗೆ ಪರಾವಲಂಬಿಗಳಾಗುತ್ತಿದ್ದೇವೆ ಎಂದು ಆತಂಕ ವ್ಯಕ್ತಪಡಿಸಿದರು.

ಫೈವ್ ಸ್ಟಾರ್ ಸಂಸ್ಕೃತಿಯ ಸುಖವಿರದಿದ್ದರೂ ಬದುಕಿನಲ್ಲಿ ಸ್ವಾಲವಂಬನೆ, ನೆಮ್ಮದಿ ಇತ್ತು. ಆದರೆ ಆಧುನಿಕ ಸಂಸ್ಕೃತಿಯಿಂದಾಗಿ ಸ್ವಾರ್ಥ ಮನೆ ಮಾಡಿದೆ. ಪರಸ್ಪರ ಉಪಕಾರ ಮಾಡುವ ಮನೋಭಾವ ಇಲ್ಲವಾಗಿದೆ. ಇಂತಹ ಸಂದರ್ಭದಲ್ಲಿ ಯುವಕರು ಸಭ್ಯ ಸಮಾಜ ನಿರ್ಮಾಣಕ್ಕಾಗಿ ಬರವಣಿಗೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.

ಪಂಪ ಭಾರತದಲ್ಲಿ ಕರ್ಣನಿಗೆ ತನ್ನ ಜನ್ಮ ರಹಸ್ಯ ತಿಳಿಸಿದ ಶ್ರೀ ಕೃಷ್ಣ, ಕೌರವರನ್ನು ಬಿಟ್ಟು ಪಾಂಡವರ ಕಡೆ ಬರುವಂತೆ ಹೇಳಿದಾಗ, ಕರ್ಣ ಅಧಿಕಾರದ ಆಸೆಗಾಗಿ ತನ್ನ ಸ್ನೇಹ, ನಂಬಿಕೆಗೆ ದ್ರೋಹ ಬಗೆಯುವುದಿಲ್ಲ ಎಂಬ ದೃಷ್ಟಾಂತ ಸೇರಿದಂತೆ ರಾಘವಾಂಕನ ಸಾಹಿತ್ಯ, ಶರಣರ ವಚನಗಳಲ್ಲಿನ ಜೀವನ ಮೌಲ್ಯಗಳನ್ನು ಉದಾಹರಿಸಿದ ಬಳಿಗಾರ ಅವರು, ಇಂತಹ ಸಾಹಿತ್ಯದ ಮೌಲ್ಯಗಳನ್ನು ಯುವಕರು ಅರಿತಿರಬೇಕು ಎಂದರು.

ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸಿದ್ದರು.

ಸಾಹಿತಿ ಡಾ.ಎಂ.ಜಿ. ಈಶ್ವರಪ್ಪ, ಶಾಸಕ ಎಂ.ಪಿ. ರೇಣುಕಾಚಾರ್ಯ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎ.ಆರ್. ಉಜ್ಜಿನಪ್ಪ ಉಪಸ್ಥಿತರಿದ್ದರು. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಯಿತು.

# ರೇಣುಕಾಚಾರ್ಯರ ಜಯಂತಿ ಬೇಡ



**(1ನೇ ಪುಟದಿಂದ)** ಜಗದ್ಗುರು ಶ್ರೀ ರೇವಣಸಿದ್ಧರ ನಾಮವನ್ನು ದುರ್ಬಳಕೆ ಮಾಡಲಾಗುತ್ತಿದೆ. ಶ್ರೀ ರೇವಣಸಿದ್ಧ ಐತಿಹಾಸಿಕ ವ್ಯಕ್ತಿ ಎಂದು ಸಂಶೋಧಕ ಡಾ.ಎಂ. ಚಿದಾನಂದಮೂರ್ತಿ ಮತ್ತು ಡಾ. ಎಂ. ಎಂ ಕಲಬುರ್ಗಿ ಸೇರಿದಂತೆ ಅನೇಕರು ಈಗಾಗಲೇ ಅಧ್ಯಯನದ ಮೂಲಕ ಸ್ಪಷ್ಟ ಪಡಿಸಿದ್ದಾರೆ.

ಆದರೆ, ರಾಜ್ಯ ಸರ್ಕಾರ ನಿಜವಾದ ಐತಿಹಾಸಿಕ ಜಗದ್ಗುರು ಶ್ರೀ ರೇವಣಸಿದ್ಧರರಿಗೆ ಸಿಗಬೇಕಾದ ಗೌರವ ತಪ್ಪಿಸಿ, ಹಾಲು ಮತ ಧರ್ಮಕ್ಕೆ ಅನ್ಯಾಯ ಮಾಡುತ್ತಿದೆ. ಈ ಬಗ್ಗೆ ಸರ್ಕಾರ ಕೂಡಲೇ ಆಗಿರುವ ತಪ್ಪನ್ನು ಸರಿಪಡಿಸದಿದ್ದರೆ ಮುಂದಿನ ದಿನಗಳಲ್ಲಿ ಹಾಲುಮತ ರಾಜ್ಯಾದ್ಯಂತ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ಸ್ವಾಮೀಜಿ ಎಚ್ಚರಿಸಿದರು.

ಶ್ರೀ ಮರುಳಸಿದ್ದೇಶ್ವರರಿಗೆ ಕಾರುಣ್ಯ ನೀಡಿದ್ದೇ ಶ್ರೀ ರೇವಣಸಿದ್ದರೆಂದು ಸಿರಿಗೆರೆ ಬೃಹನ್ಮಠದ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹಲವು ಬಾರಿ ಹೇಳಿದ್ದಾರೆ. ಇಂತಹ ಸಂದರ್ಭದಲ್ಲಿ ಕೆಲವರು ಸುಳ್ಳನ್ನು ಸತ್ಯ ಮಾಡಲು ಹೊರಟಿದ್ದಾರೆ. ಅದು ಎಂದಿಗೂ ಸಾಧ್ಯವಿಲ್ಲ ಎಂದು ಸ್ವಾಮೀಜಿ ಹೇಳಿದರು.

**ಸ್ವಾಮೀಜಿ ಬೇಸರ :** ಮಾರಿ ಹಬ್ಬದ ಹೆಸರಿನಲ್ಲಿ ಕುರಿ, ಕೋಳಿ ತಿನ್ನುವುದಕ್ಕೆ ಕೊಟ್ಟ ಆದ್ಯತೆಯನ್ನು ಶ್ರೀ ಮಠದ ಕಾರ್ಯಕ್ರಮಕ್ಕೆ ಕೊಡದಿರುವುದಕ್ಕೆ ಬೇಸರ ವ್ಯಕ್ತಪಡಿಸಿದ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ, ದೇವತೆಯ ಹೆಸರಿನಲ್ಲಿ ಪ್ರಾಣಿ ಬಲಿ ಕೊಡುವ ದುರಂತದ, ಅನಾಚಾರದ ಹಬ್ಬಗಳು ಶೋಷಿತ ಸಮುದಾಯಗಳಿಗೆ ಮಾರಕವಾಗಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಮೌಢ್ಯದ ಹಬ್ಬಗಳನ್ನು ಎಲ್ಲಿಯವರೆಗೆ ನಿಲ್ಲಿಸುವುದಿಲ್ಲವೋ ಅಲ್ಲಿಯವರೆಗೆ ಶೋಷಿತರ, ಹಿಂದುಳಿದವರ ಉದ್ಧಾರ ಸಾಧ್ಯವಿಲ್ಲ. ಇಂತಹ ಹಬ್ಬಗಳಿಂದ ಜನ ಜಾಗೃತರಾಗಿ ಹಬ್ಬಕ್ಕೆ ದುಂದುವೆಚ್ಚ ಮಾಡುವ ಹಣವನ್ನು ಮಕ್ಕಳ ಉತ್ತಮ ಶಿಕ್ಷಣಕ್ಕೆ ಬಳಸಿದರೆ ಅದು ಸಾರ್ಥಕವಾಗುತ್ತದೆ.

ನಾವು ಮಾಂಸಾಹಾರದ ವಿರೋಧಿ ಅಲ್ಲ, ದೇವರ ಹೆಸರಿನಲ್ಲಿ ಮನೆತನ ಹಾಳು ಮಾಡಿಕೊಳ್ಳುತ್ತಿರುವುದಕ್ಕೆ ನಮ್ಮ ವ್ಯಾಪಕ ವಿರೋಧವಿದೆ. ಬಡವರ ಹತ್ತಿರ ಹಣ ಇರಲ್ಲ, ಹಬ್ಬಕ್ಕೆ ಬಡ್ಡಿಯಂತೆ ಸಾಲ ಮಾಡಿ ಕುರಿ ತಂದು ಹಬ್ಬ ಮಾಡುವುದು ಎಷ್ಟರ ಮಟ್ಟಿಗೆ ಸರಿ? ಎಂದು ಪ್ರಶ್ನಿಸಿದ ಶ್ರೀಗಳು, ಇಂತಹ ಹಬ್ಬಗಳಿಗೆ ಸರ್ಕಾರ ಹಾಗೂ ಅಧಿಕಾರಿಗಳು ಕಡಿವಾಣ ಹಾಕಬೇಕೆಂದು ಒತ್ತಾಯಿಸಿದರು.

ಮಠದ ಸಮುದಾಯ ಭವನಕ್ಕೆ ಅವಶ್ಯವಿರುವ 6 ಕೊಠಡಿಗಳ ನಿರ್ಮಾಣಕ್ಕೆ ಸಚಿವರು, ಸಂಸದರು ಗಮನ ಹರಿಸಬೇಕು. ಕಾರ್ಗಿಲ್ ಕಂಪನಿಯಿಂದ ಬರುವ ಕೆಟ್ಟ ವಾಸನೆಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದ್ದು, ಕೆಟ್ಟ ವಾಸನೆ ಬರದಂತೆ ನಿಲ್ಲಿಸಲು ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕೆಂದು ಸ್ವಾಮೀಜಿ ಒತ್ತಾಯಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ಮಾತನಾಡಿ, ಹೊಸದುರ್ಗದಲ್ಲಿ ನಿರ್ಮಿಸುತ್ತಿರುವ ಕನಕದಾಸರ ಏಕಶಿಲೆ ಪ್ರತಿಮೆ ಕಾಮಗಾರಿಗೆ ಯಡಿಯೂರಪ್ಪ ಅವರು ಕೊಟ್ಟ ಮಾತಿನಂತೆ 5 ಕೋಟಿ ರೂ. ಅನುದಾನ ಬಿಡುಗಡೆ ಮಾಡಿಸಿದ್ದಾರೆ. ಮೈಲಾರ ಶಾಖಾ ಮಠದಲ್ಲಿ ವಿದ್ಯಾರ್ಥಿ ನಿಲಯ ನಿರ್ಮಾಣಕ್ಕೆ 10 ಕೋಟಿ ಅನುದಾನ ನೀಡಿದ್ದೇವೆ. ದಾವಣಗೆರೆ - ಹರಿಹರ ಮತ್ತಿತರೆ ಕಡೆ ಹಬ್ಬಗಳಿಂದಾಗಿ ಈ ಬಾರಿ ಸರಳವಾಗಿ ಆಗಿರುವ ಈ ಕಾರ್ಯಕ್ರಮವನ್ನು ಮುಂದಿನ ವರ್ಷ ವಿಜೃಂಭಣೆಯಿಂದ ಮಾಡೋಣ ಎಂದು ಭೈರತಿ ಬಸವರಾಜ ತಿಳಿಸಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಶ್ರೀಗಳು ಹೇಳಿದಂತೆ ಮಾರಿ ಹಬ್ಬದ ಹೆಸರಿನಲ್ಲಿ ನಡೆಯುವ ದುಂದು ವೆಚ್ಚ ನಿಲ್ಲಬೇಕು. ಇದರಿಂದ ಬಡವರಿಗೆ ಬಹಳ ತೊಂದರೆಯಾಗುತ್ತದೆ. ದಾವಣಗೆರೆಯಲ್ಲಿ ನಡೆದ ದುಗ್ಗಮ್ಮನ ಹಬ್ಬಕ್ಕೆ ಕನಿಷ್ಠ 50 ಕೋಟಿ ರೂ. ಖರ್ಚಾಗಿದೆ. ಮಾರಿಹಬ್ಬ ಮಾಡುವವರು ನೀವು, ಬಂದು ಊಟ ಉಂಡು ಹೋಗುವವರು ಲಿಂಗಾಯತರು, ಬ್ರಾಹ್ಮಣರು ಎಂದು ಹಾಸ್ಯವಾಗಿ ಹೇಳಿದರು.

ದುಡ್ಡು ದೊಡ್ಡದಲ್ಲ, ವಿದ್ಯೆ ದೊಡ್ಡದು. ಇದನ್ನು ಎಲ್ಲರೂ ಅರ್ಥ ಮಾಡಿಕೊಂಡು ಮಾರಿ ಹಬ್ಬ ನಿಲ್ಲಿಸಿ, ವಿದ್ಯೆಗೆ ಹಣ ಖರ್ಚು ಮಾಡಿ, ನಿಮ್ಮ ಮಕ್ಕಳು ಚನ್ನಾಗಿ ಓದಿದರೆ ನಿಮ್ಮ ಮನೆಗೆ, ಊರಿಗೆ, ಸಮಾಜಕ್ಕೆ, ದೇಶಕ್ಕೆ ಒಳ್ಳೆಯದಾಗುತ್ತದೆ. ಹಾಲುಮತಸ್ಥರು ಹಾಲಿನಂತ ಮನಸ್ಸಿನವರು, ಅವರ ಕೈಯಿಂದ ಏನೇ ಮಾಡಿಸಿದರೂ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಎಲ್ಲರಲ್ಲೂ ಇದೆ. ಅದನ್ನು ಉಳಿಸಿಕೊಂಡು ಹೋಗಿ ಎಂದು ಸಿದ್ದೇಶ್ವರ ಹೇಳಿದರು.

ಶಾಸಕ ಎಸ್. ರಾಮಪ್ಪ ಮಾತನಾಡಿದರು. ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಬೆಳ್ಳೂಡಿ ಗ್ರಾ.ಪಂ. ಅಧ್ಯಕ್ಷ ಶ್ರೀಮತಿ ಗಂಗಮ್ಮ ಬೀರಪ್ಪ, ಮುಖಂಡರಾದ ಕುಣೆಬೆಳಕೆರೆ ದೇವೇಂದ್ರಪ್ಪ, ಎಂ ನಾಗೇಂದ್ರಪ್ಪ, ಕುಂಬಳೂರು ವಿರೂಪಾಕ್ಷಪ್ಪ, ನಂದಿಗಾವಿ ಶ್ರೀನಿವಾಸ್, ತಾ.ಕುರುಬ ಸಮಾಜದ ಅಧ್ಯಕ್ಷ ಕೆ. ಜಡಿಯಪ್ಪ, ಕಾರ್ಯದರ್ಶಿ ಕೆ. ಗಂಗಾಧರ್, ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ, ಐರಣಿ ಅಣ್ಣಪ್ಪ, ನಗರಸಭೆ ಮಾಜಿ ಅಧ್ಯಕ್ಷ ಬಿ ರೇವಣಸಿದ್ದಪ್ಪ, ಸಿ.ಎನ್. ಹುಲಗೇಶ್, ಮಲೇಬೆನ್ನೂರಿನ ಪಿ.ಎಚ್. ಶಿವಕುಮಾರ್, ಬಿ. ಮಂಜುನಾಥ್, ಭೋವಿಕುಮಾರ್, ಎಳೆಹೊಳೆ ಕುಮಾರ್, ಬೆಳ್ಳೂಡಿ ಸಂತೋಷ್, ಭಾನುವಳ್ಳಿ ಕರಿಯಪ್ಪ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಉಪ ವಿಭಾಗಾಧಿಕಾರಿ ಶ್ರೀಮತಿ ಮಮತಾ ಹೊಸಗೌಡರ್, ದೂಡಾ ಆಯುಕ್ತ ಬಿ.ಟಿ. ಕುಮಾರಸ್ವಾಮಿ, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಹೊರಪೇಟೆ ಮಲ್ಲೇಶಪ್ಪ, ಸಿಪಿಐ ಸತೀಶ್, ಪಿಎಸ್‌ಐ ಗಳಾದ ವೀರಬಸಪ್ಪ, ರವಿಕುಮಾರ್ ಈ ವೇಳೆ ಹಾಜರಿದ್ದರು.

## ಧರ್ಮಾಧಿಕಾರಿಗಳಿಗೆ ಬಿಜೆಪಿ ಅಗೌರವ

**(1ನೇ ಪುಟದಿಂದ)** ಆಂಜನೇಯ ಆರೋಪಿಸಿದ್ದಾರೆ.

ಶಾಲೆಯೊಂದರ ಮುಖ್ಯಶಿಕ್ಷಕರು ಬಗೆಹರಿಸಬೇಕಿದ್ದ ಹಿಜಾಬ್ ಎಂಬ ಸಣ್ಣ ವಿಷಯ ನಾಡಿನಲ್ಲಿ ಧರ್ಮಗಳ ಮಧ್ಯೆ ಕಂದಕವನ್ನು ಸೃಷ್ಟಿಸಿ, ಕೋರ್ಟ್ ಮೆಟ್ಟಿಲೇರಿ, ನ್ಯಾಯಾಲಯದ ಸಮಯವನ್ನು ವ್ಯರ್ಥ ಮಾಡುವ ರೀತಿಯಾಗಿದೆ. ಇದಕ್ಕೆ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ನಾಯಕರ ಮನಸ್ಸಿನಲ್ಲಿರುವ ವಿಷದ ನಂಜು ಕಾರಣ ಎಂದು ಹೇಳಿದ್ದಾರೆ.

ಈಗ ಹಿಜಾಬ್ ವಿವಾದ ತಣ್ಣಗಾಗುತ್ತಿದ್ದಂತೆ ಆತಂಕಕ್ಕೆ ಒಳಗಾಗಿರುವ ಬಿಜೆಪಿ ನಾಯಕರು, ಅದನ್ನು ಜೀವಂತವಾಗಿ ಇಡುವ ಪ್ರಯತ್ನ ನಡೆಸುತ್ತಿದ್ದಾರೆ. ಸಿದ್ದರಾಮಯ್ಯ ಅವರು ದೇಶದ ಮಠಾಧೀಶರು, ತಾಯಂದಿರು ಗೌರವದ ಸೂಚಕವಾಗಿ ತಲೆ ಮೇಲೆ ಬಟ್ಟೆ ಹಾಕುತ್ತಾರೆ ಎಂದು ಹೇಳಿದ ಮಾತನ್ನೇ ತಿರುಚುವ ಕೆಲಸಕ್ಕೆ ಕೈ ಹಾಕಿದೆ.

ಈ ಮೂಲಕ ನಾಡಿನ ಮಠಾಧೀಶರನ್ನು ಅವಮಾನಗೊಳಿಸುವ ಕೆಲಸ ಬಿಜೆಪಿ ಮಾಡುತ್ತಿದೆ. ಸಿದ್ದರಾಮಯ್ಯ ಹೇಳದ ಮಾತನ್ನು ಬಿಜೆಪಿ ನಾಯಕರೇ ಹೇಳಿ, ನಮ್ಮ ಧರ್ಮಾಧಿಕಾರಿಗಳಿಗೆ ಅಪಮಾನ ಮಾಡುವ ಕೆಲಸ ಬಿಜೆಪಿ ಮಾಡುತ್ತಿದೆ ಎಂದು ಕಿಡಿಕಾರಿದ್ದಾರೆ.

ರಾಜ್ಯದಲ್ಲಿ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗದೆ ಆಡಳಿತ ವೈಫಲ್ಯ ಕಂಡಿರುವ ಬಿಜೆಪಿ ವಿರುದ್ಧ ಎಲ್ಲೆಡೆ ಜನಾಕ್ರೋಶ ವ್ಯಕ್ತವಾಗುತ್ತಿದೆ. ಇದೇ ಕಾರಣಕ್ಕೆ ಜನರ ಗಮನ ಬೇರೆಡೆ ಸೆಳೆಯಲು ಬಿಜೆಪಿ ಈ ರೀತಿ ವಿವಾದಗಳನ್ನು ಹುಟ್ಟು ಹಾಕುತ್ತಿದೆ. ರಾಜ್ಯದಲ್ಲಿ ಏಕೈಕ ಜನಾಕರ್ಷಣೆ ನಾಯಕ, ಜನಪ್ರಿಯತೆಯಲ್ಲಿ ಎತ್ತರದ ಸ್ಥಾನದಲ್ಲಿರುವ ಸಿದ್ದರಾಮಯ್ಯ ವಿರುದ್ಧ ಸುಳ್ಳು ಸುದ್ದಿ ಹರಡಲು ಬಿಜೆಪಿ ಯತ್ನಿಸುತ್ತಿದೆ ಎಂದು ಆಂಜನೇಯ ದೂರಿದ್ದಾರೆ.

## ರಸ್ತೆ ಅಪಘಾತದಲ್ಲಿ ನಗರದ ಇಬ್ಬರು ನಾಟಕ ಕಲಾವಿದೆಯರ ಸಾವು

**(1ನೇ ಪುಟದಿಂದ)** ಘಟನೆಯಲ್ಲಿ ಗಾಯಗೊಂಡ ಕಲಾವಿದೆ ಕಾವ್ಯ ಹಾಗೂ ಚಾಲಕನನ್ನು ಸ್ಥಳೀಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಕುರಿತು ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕೊರೊನಾದ ಕರೆ ಸಂದೇಶಕ್ಕೆ ತೆರೆ ಸಾಧ್ಯತೆ

**(1ನೇ ಪುಟದಿಂದ)** ದೂರುಗಳೂ ಕೇಳಿ ಬಂದಿದ್ದವು.

ಕೊರೊನಾ ಬಂದು ಎರಡು ವರ್ಷಗಳ ನಂತರ ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಪತ್ರ ಬರೆದಿರುವ ಟೆಲಿಕಾಂ ಇಲಾಖೆ, ಕೊರೊನಾ ಕುರಿತ ದೂರವಾಣಿ ಘೋಷಣೆಗಳು ಹಾಗೂ ಕಾಲರ್ ಟ್ಯೂನ್‌ಗಳನ್ನು ನಿಲ್ಲಿಸುವಂತೆ ಕೇಳಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಮೊಬೈಲ್ ಬಳಕೆದಾರರು ಹಾಗೂ ಕಂಪನಿಗಳೆರಡರಿಂದಲೂ ಈ ಬಗ್ಗೆ ಮನವಿಗಳು ಬಂದಿರುವುದಾಗಿ ಟೆಲಿಕಾಂ ಇಲಾಖೆ ತಿಳಿಸಿದೆ.

21 ತಿಂಗಳ ನಂತರ ದೂರವಾಣಿ ಮೂಲಕ ನೀಡಲಾಗುತ್ತಿದ್ದ ಸಂದೇಶಗಳು ತಮ್ಮ ಗುರಿ ಈಡೇರಿಸುವಲ್ಲಿ ಸಫಲವಾಗಿವೆ. ಇನ್ನು ಮುಂದೆ ಸಂದೇಶಗಳನ್ನು ಮುಂದುವರೆಸುವುದು ಪ್ರಯೋಜನಕಾರಿಯಲ್ಲ ಎಂದು ಇಲಾಖೆ ಹೇಳಿದೆ.

# ನೀರನ್ನು ಸಂರಕ್ಷಿಸದಿದ್ದರೆ ಮುಂದಿನ ಪೀಳಿಗೆಗೆ ಸಂಪನ್ಮೂಲ ಕೊರತೆ

### ಅತ್ತಿಗೆರೆ : ವಿಶ್ವ ಜಲ ದಿನಾಚರಣೆ ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಪ್ರವೀಣ್‌ನಾಯ್ಕ

ದಾವಣಗೆರೆ,ಮಾ.27- ಭೂಮಿ ಮೇಲೆ ಸಕಲ ಜೀವರಾಶಿ ಬದುಕುತ್ತಿರುವುದು ನೀರು, ಗಾಳಿ, ಆಹಾರದಿಂದ, ಕೋವಿಡ್ ಸಂದರ್ಭದಲ್ಲಿ ನಮಗೆ ನೀರು ಮತ್ತು ಸ್ವಚ್ಛತೆ ಬಗ್ಗೆ ಅರಿವಾಗಿದೆ. ನೀರಿಗಾಗಿ ಸುಸ್ಥಿರ ಅಭಿವೃದ್ಧಿಯತ್ತ ಕ್ರಮ ಕೈಗೊಳ್ಳಲು, ಜನರನ್ನು ಉತ್ತೇಜಿಸಲು ವಿಶ್ವ ಜಲ ದಿನಾಚರಣೆಯನ್ನು ಹಮ್ಮಿಕೊಂಡಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಪ್ರವೀಣ್‌ನಾಯ್ಕ ಹೇಳಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಜಿಲ್ಲಾ ವಕೀಲರ ಸಂಘ, ಶ್ರೀ ಕೇಸರಿ ವಿದ್ಯಾಸಂಸ್ಥೆ ಇವರ ಆಶ್ರಯದಲ್ಲಿ ಅತ್ತಿಗೆರೆ ಗ್ರಾಮದ ಶ್ರೀ ಮಹಾದೇವ ಕೇಸರಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಿನ್ನೆ ಹಮ್ಮಿಕೊಂಡಿದ್ದ ವಿಶ್ವ ಜಲ ದಿನ-2022 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನೀರು ಜೀವ ಜಲ ಮತ್ತು ಅಮೂಲ್ಯವಾಗಿದೆ. ನೀರನ್ನು ಉಳಿಸಲು ಸರಿಯಾದ ಕ್ರಮ ಕೈಗೊಳ್ಳದಿದ್ದರೆ, ಮುಂದಿನ ಪೀಳಿಗೆಗೆ ಈ ಸಂಪನ್ಮೂಲ ಸಂರಕ್ಷಿಸಲು ಸಾಧ್ಯವಿಲ್ಲ. ನೀರಿನ ಪ್ರಾಮುಖ್ಯತೆ ಕುರಿತು ಜನರಲ್ಲಿ ಅರಿವು ಮೂಡಿಸಲು ವಿಶ್ವ ಸಂಸ್ಥೆಯು 1993ರಿಂದ ಪ್ರತಿ ವರ್ಷ ಮಾರ್ಚ್ 22ರಂದು ವಿಶ್ವ ಜಲ ದಿನವನ್ನು ನೀರಿನ ಕೊರತೆ ಬಗ್ಗೆ ಜಾಗೃತಿ ಮೂಡಿಸಲು ಆಚರಿಸಲಾಗುತ್ತಿದೆ ಎಂದು ಅವರು ತಿಳಿಸಿದರು.



ಹಿರಿಯ ವಕೀಲರಾದ ಎಲ್.ಹೆಚ್. ಅರುಣ್‌ಕುಮಾರ್ ವಿಶೇಷ ಉಪನ್ಯಾಸ ನೀಡಿ, ಭೂಮಿಯು ಮುಕ್ಕಾಲು ಭಾಗ ನೀರು ಆವರಿಸಿದ್ದರೂ ಕೂಡ ಇಂದಿಗೂ ನೀರಿನ ಸಮಸ್ಯೆ ಆವರಿಸಿದೆ. 2050ರ ವೇಳೆಗೆ ವಿಶ್ವದ ಜನಸಂಖ್ಯೆ 1ಸಾವಿರ ಕೋಟಿ ತಲುಪುವ ಸಾಧ್ಯತೆ ಇದೆ. ಆ ವೇಳೆಗೆ ಜಗತ್ತಿನಲ್ಲಿ ನೀರಿನ ಬೇಡಿಕೆ ಶೇ 50ರಷ್ಟು ಹೆಚ್ಚಾಗಲಿದೆ. ಆಗ ಸಮಸ್ಯೆಯ ತೀವ್ರತೆ ನಿರ್ವಹಿಸುವುದು ಕಷ್ಟ. ಜಗತ್ತಿನಲ್ಲಿ ಕುಡಿಯುವ ನೀರಿ ಅರ್ಧದಷ್ಟು ಅಂತರ್ಜಲವಾಗಿದೆ. ಇದರ ಸಂರಕ್ಷಣೆ, ಸುಸ್ಥಿರ ಬಳಕೆ ಹಾಗೂ ಅದರ ಪ್ರಮಾಣ ಹೆಚ್ಚಿಸಲು ಕೈಗೊಳ್ಳಬೇಕಾದ ಕ್ರಮ ಕುರಿತು ಜಾಗೃತಿ ಮೂಡಿಸುವುದು ಅಗತ್ಯವಾಗಿದೆ. ಜಗತ್ತಿನಾದ್ಯಂತ ಪ್ರತಿಯೊಬ್ಬರಿಗೂ ಸ್ವಚ್ಛ ಕುಡಿಯುವ ನೀರು ಒದಗಿಸುವುದು. ನೈರ್ಮಲ್ಯ ಕಾಪಾಡುವುದು ಜಲ ದಿನಾಚರಣೆ ಮುಖ್ಯ ಗುರಿಯಾಗಿದೆ ಎಂದರು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಕಾರ್ಯದರ್ಶಿ ಎಂ.ಗುರುಸಿದ್ದಸ್ವಾಮಿ ಮಾತನಾಡಿ, ವರ್ಷದಿಂದ ವರ್ಷಕ್ಕೆ ನೀರಿನ ಬಳಕೆ ಹೆಚ್ಚಾಗುತ್ತಿದ್ದು, ಶುದ್ಧ ಕುಡಿಯುವ ನೀರಿಗಾಗಿ ಜನ ಪರಿತಪಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ನೀರಿಗಾಗಿ ಯುದ್ಧ ನಡೆದರೂ ಆಶ್ಚರ್ಯಪಡಬೇಕಾಗಿಲ್ಲ. ಈ ಹಿನ್ನೆಲೆಯಲ್ಲಿ ನೀರಿನ ಮಹತ್ವ, ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸುವುದರ ಜೊತೆಗೆ ಜಲ ಮೂಲಗಳ ಸಂರಕ್ಷಣೆ ಮಾಡುವುದು ಅವಶ್ಯಕವಾಗಿದೆ ಎಂದು ಕಳಕಳಿ ವ್ಯಕ್ತಪಡಿಸಿದರು.

ಸಂಸ್ಥೆಯ ಕಾರ್ಯದರ್ಶಿ ಎಂ.ಜಿ.ನಾಗಪ್ಪ ಮಾತನಾಡಿ, ಪ್ರಕೃತಿಯನ್ನು ಪ್ರೀತಿಸಬೇಕು, ಗೌರವಿಸಬೇಕು. ಆ ಮೂಲಕ ಜಲ ಸಂರಕ್ಷಣೆಗೆ ಮುಂದಾಗಬೇಕು ಎಂದು ಕರೆ ನೀಡಿದರು.

ಅತ್ತಿಗೆರೆ ಗ್ರಾಪಂ ಅಧ್ಯಕ್ಷರಾದ ಯಶೋಧಮ್ಮ ಚಂದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಅತಿಥಿಯಾಗಿ ಕೇಸರಿ ವಿದ್ಯಾಸಂಸ್ಥೆಯ ಅಧ್ಯಕ್ಷ ಓಂಕಾರಪ್ಪ, ಮುಖ್ಯೋಪಾಧ್ಯಾಯ ಜಿ.ಡಿ.ಲೋಹಿತ್‌ಕುಮಾರ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಗುರುತಿಸಿದ ರಾಜ್ಯಗಳು

**(1ನೇ ಪುಟದಿಂದ)** ನೀಡಲಾಗುತ್ತಿದೆ ಎಂದು ಕಣುಂಗೊ ಹೇಳಿದ್ದಾರೆ. ಪೋರ್ಟಲ್ ಮೂಲಕ ಇದುವರೆಗೂ 20 ಸಾವಿರ ಮಕ್ಕಳನ್ನು ಗುರುತಿಸಲಾಗಿದೆ. ಅವರಿಗೆ ನೆರವು ನೀಡಲಾಗುತ್ತಿದೆ. 2019ರಿಂದಲೂ ಪೋರ್ಟಲ್ ಕಾರ್ಯ ನಿರ್ವಹಿಸುತ್ತಿದೆ ಎಂದವರು ಹೇಳಿದ್ದಾರೆ.

ಆದರೆ, ರಾಜ್ಯಗಳು ಈ ದಿಸೆಯಲ್ಲಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಆದಷ್ಟು ಶೀಘ್ರ ರಾಜ್ಯಗಳು ಈ ದಿಸೆಯಲ್ಲಿ ಕಾರ್ಯ ನಿರ್ವಹಿಸಬೇಕಿದೆ. ಮಧ್ಯ ಪ್ರದೇಶ ಹಾಗೂ ಪಶ್ಚಿಮ ಬಂಗಾಳಗಳು ಈ ದಿಸೆಯಲ್ಲಿ ಉತ್ತಮ ಕೆಲಸ ಮಾಡಿವೆ. ಆದರೆ, ದೆಹಲಿ ಮತ್ತು ಮಹಾರಾಷ್ಟ್ರಗಳು ಯಾವುದೇ ಕೆಲಸ ಮಾಡಿಲ್ಲ ಎಂದು ಕಣುಂಗೊ ಹೇಳಿದ್ದಾರೆ.


॥ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**




ದಾವಣಗೆರೆ ಹದಡಿ ರಸ್ತೆ, ಶ್ರೀನಿವಾಸ ಬಡಾವಣೆ 4ನೇ ಕ್ರಾಸ್ ವಾಸಿ
ಶ್ರೀಮತಿ ಲೀಲಮ್ಮ ಮಾಕನೂರು ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 20.3.2022ರ ಭಾನುವಾರ ಬೆಳಿಗ್ಗೆ 5.30ಕ್ಕೆ ನನ್ನ ಪೂಜ್ಯ ಪತಿಯವರಾದ
**ಶ್ರೀ ಸಿದ್ದೇಶಪ್ಪ ಮಾಕನೂರು**
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು** ದಿನಾಂಕ 28.03.2022ರ ಸೋಮವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ವಿದ್ಯಾನಗರದ ಶ್ರೀ ಈಶ್ವರ, ಪಾರ್ವತಿ, ಗಣಪತಿ ದೇವಸ್ಥಾನದಲ್ಲಿ ನೆರವೇರಿಸಲು ಗುರು ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖಿತಪ್ತರು: ಶ್ರೀಮತಿ ಲೀಲಮ್ಮ ಮಾಕನೂರು
ಶ್ರೀಮತಿ ಸುನೀತ ಶ್ರೀ ಗುರುಮೂರ್ತಿ, ಚಿ॥ ಖುಷಿ
ಶ್ರೀಮತಿ ನಂದಿನಿ ಶ್ರೀ ಮಲ್ಲಿಕಾರ್ಜುನ್ ಎಸ್. ಮಾಕನೂರು
ಚಿ॥ ಮನ್ವಿತ್ ಮಾಕನೂರು, ಚಿ॥ ಮನೋಕ್ಷ್ ಮಾಕನೂರು
ಶ್ರೀ ಮಂಜುನಾಥ ಎಸ್. ಮಾಕನೂರು ಮತ್ತು
ಮಾಕನೂರು ವಂಶಸ್ಥರು ಹಾಗೂ ಬಂಧು-ಮಿತ್ರರು.
ಮೊ: 73539 96828, 76766 64052, 96112 74774



**ಕೈಲಾಸ ಶಿವಗಣರಾಧನೆಯ ಆಹ್ವಾನ ಪತ್ರಿಕೆ**



ದಿನಾಂಕ:26.03.2022ರ ಬೆಳಿಗ್ಗೆ 5:00 ಗಂಟೆಗೆ ನಮ್ಮ ಪೂಜ್ಯ ತಂದೆಯವರಾದ
**ಶ್ರೀ ಬಿ.ಈಶ್ವರಪ್ಪ**
(ನಿವೃತ್ತ ಆಹಾರ ನಿರೀಕ್ಷಕರು, ದಾವಣಗೆರೆ ಜಿಲ್ಲೆ, ಬೆಳ್ಳೂಡಿ ಗ್ರಾಮ)
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
"ಕೈಲಾಸ ಶಿವಗಣಾರಾಧನೆಯನ್ನು"
ದಿನಾಂಕ:28.03.2022 ರ ಸೋಮವಾರ ಮಧ್ಯಾಹ್ನ:1.00 ಗಂಟೆಗೆ ಬೆಳ್ಳೂಡಿ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ಇಂತಿ ದುಃಖಿತಪ್ತ ಕುಟುಂಬಸ್ಥರು:-
ದಿ॥ ಶ್ರೀ ಬಿ. ಈಶ್ವರಪ್ಪನವರ ಧರ್ಮಪತ್ನಿ ಶ್ರೀಮತಿ ಶಕುಂತಲಮ್ಮ ಮತ್ತು ಮಕ್ಕಳು.
ಶ್ರೀಮತಿ ರೇಖಾ, ಶ್ರೀ ನಾಗೇಂದ್ರಪ್ಪ ಮತ್ತು ಮಕ್ಕಳು
ಬೆಳ್ಳೂಡಿ ಗ್ರಾಮಸ್ಥರು ಮತ್ತು ಬಂಧು ಮಿತ್ರರು
ಮೊ : 9961945998, 9844509144, 9164109086



॥ ಶ್ರೀ ಮುರುಗೇಶಾಯ ನಮಃ ॥

**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**

ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್, 5ನೇ ಮೇನ್, 5ನೇ ಕ್ರಾಸ್ ವಾಸಿ
**ದಿ॥ ಶ್ರೀ ಗೌಡರ ಅಜ್ಜಪ್ಪನವರ ಮಗ ಶ್ರೀ ಜಯಪ್ರಕಾಶ್ ಜಿ.ಎ.**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 24.03.2022ರ ಗುರುವಾರ ಸಂಜೆ 4.45ಕ್ಕೆ ನನ್ನ ಸಹೋದರನಾದ



**ಶ್ರೀ ಬಸವಲಿಂಗಪ್ಪ ಜಿ.ಎ.**
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು** ದಿನಾಂಕ 28.03.2022 ರ ಸೋಮವಾರ ಮಧ್ಯಾಹ್ನ 12.30ಕ್ಕೆ ದಾವಣಗೆರೆ ಸಿಟಿ ಎಂ.ಸಿ.ಸಿ. 'ಎ' ಬ್ಲಾಕ್‌ನಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ಇಂತಿ ದುಃಖತಪ್ತರು
ಮೃತರ ಧರ್ಮಪತ್ನಿ ಶ್ರೀಮತಿ ಗೀತಾ ಬಿ. ಗೌಡರ್, ಮಗ, ಅಕ್ಕಂದಿರು, ಗೌಡರ ವಂಶಸ್ಥರು ಹಾಗೂ ಬಂಧು-ಮಿತ್ರರು.
ಮೊ : 94497 30252, 97396 11121, 94482 32813
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.


## ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪ್ರಯಾಣ

**ರಾಣೇಬೆನ್ನೂರು**

ರಾಣೇಬೆನ್ನೂರು, ಮಾ.27- ಪ್ರಸುತ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವತಿಯಿಂದ ಉಚಿತ ಪ್ರಯಾಣಕ್ಕೆ ಅವಕಾಶ ಮಾಡಿಕೊಡಲಾಗಿದೆ. ನಾಳೆ ದಿನಾಂಕ 28ರ ಸೋಮವಾರದಿಂದ ಏಪ್ರಿಲ್ 11ರವರೆಗೆ ಪರೀಕ್ಷೆಗೆ ಹಾಜರಾಗುವ ಎಲ್ಲಾ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ತಮ್ಮ ವಾಸ ಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರವರೆಗೆ ಹೋಗುವಾಗ ಮತ್ತು ಬರುವಾಗ ಪರೀಕ್ಷಾ ಪ್ರವೇಶ ಪತ್ರ ತೋರಿಸಿ, ನಗರ, ಹೊರವಲಯ ಹಾಗೂ ಗ್ರಾಮೀಣ ಭಾಗದಿಂದ ಸಾಮಾನ್ಯ ಹಾಗೂ ವೇಗದೂತ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಸಂಸ್ಥೆ ಉಪಾಧ್ಯಕ್ಷ ಡಾ. ಬಸವರಾಜ ಕೇಲಗಾರ ತಿಳಿಸಿದ್ದಾರೆ.

### ಕಲಾವಿದೆ ಶ್ರೀಮತಿ ಗೀತಾ ನಿಧನ



ದಾವಣಗೆರೆ ವಿನೋಬನಗರ, 3ನೇ ಮೇನ್, 10ನೇ ಕ್ರಾಸ್ ಗಣೇಶ ದೇವಸ್ಥಾನದ ಹತ್ತಿರದ ವಾಸಿ ಕಲಾವಿದೆ ಶ್ರೀಮತಿ ಗೀತಾ (38) ಇವರು ದಿನಾಂಕ : 27.3.2022 ರ ಭಾನುವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರು. ತಾಯಿ, ಓರ್ವ ಪುತ್ರಿ, ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 28.3.2022 ರ ಸೋಮವಾರ ಮಧ್ಯಾಹ್ನ 4 ಗಂಟೆಗೆ ಗಾಂಧಿನಗರದ ರುದ್ರ ಭೂಮಿಯಲ್ಲಿ ನೆರವೇರಲಿದೆ.

### ಕಕ್ಕರಗೊಳ್ಳದ ಮಾಯಮ್ಮ ನಿಧನ



ದಾವಣಗೆರೆ ತಾಲ್ಲೂಕು ಕಕ್ಕರಗೊಳ್ಳ ಗ್ರಾಮದ ವಾಸಿ ದಿ.ಹರಿಹರದ ಮಾಯಪ್ಪ ಇವರ ಧರ್ಮಪತ್ನಿ ಶ್ರೀಮತಿ ಮಾಯಮ್ಮ (70) ಅವರು ದಿನಾಂಕ: 27.3.2022 ರಂದು ಭಾನುವಾರ ಸಂಜೆ 6 ಗಂಟೆಗೆ ನಿಧನಾರಾಗಿದ್ದಾರೆ. ಓರ್ವ ಪುತ್ರ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 28.3.2022 ರಂದು ಸೋಮವಾರ ಮಧ್ಯಾಹ್ನ 1 ಗಂಟೆಗೆ ಕಕ್ಕರಗೊಳ್ಳ ಗ್ರಾಮದ ಅವರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

### ಕೆಟಿಜೆ ನಗರದ ಗಿರಿಜಮ್ಮ ನಿಧನ



ದಾವಣಗೆರೆ ಕೆ.ಟಿ.ಜೆ. ನಗರ 8ನೇ ಕ್ರಾಸ್, ನಿಟ್ಟುವಳ್ಳಿ ರಸ್ತೆ ವಾಸಿಯಾದ ಡಾ. ಜಿ.ಎಂ. ಈಶ್ವರಪ್ಪ ಅವರ ಧರ್ಮಪತ್ನಿ ಶ್ರೀಮತಿ ಗಿರಿಜಮ್ಮ (70) ಅವರು ದಿನಾಂಕ 27.03.2022 ರ ಭಾನುವಾರ ರಾತ್ರಿ 9.45 ಕ್ಕೆ ನಿಧನರಾದರು. ಕಾಂಗ್ರೆಸ್ ಮುಖಂಡ ರುದ್ರಮುನಿ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು - ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28.03.2022 ರ ಸೋಮವಾರ ಮಧ್ಯಾಹ್ನ 3 ಘಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ಹರಿಹರ ತಾಲ್ಲೂಕಿಗೆ ಎಸಿಬಿ ಭೇಟಿ

ದಾವಣಗೆರೆ ಮಾ.27- ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ಇದೇ ನಾಡಿದ್ದು ದಿನಾಂಕ 29ರ ಮಂಗಳವಾರ ತಾಲ್ಲೂಕಿಗೆ ಭೇಟಿ ನೀಡಿ, ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಿದ್ದಾರೆ.

ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್ ಕೌಲಾಪೂರೆ ಅಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 12.30ರವರೆಗೆ ಪ್ರವಾಸಿ ಮಂದಿರದಲ್ಲಿ ಸಾರ್ವಜನಿಕರ ದೂರು, ಅಹವಾಲುಗಳನ್ನು ಸ್ವೀಕರಿಸುವರು, ದೂರುಗಳನ್ನು ಪ್ರಪತ್ರ-1 ಮತ್ತು 2ರಲ್ಲಿ ಅಫಿಡೆವಿಟ್‌ನೊಂದಿಗೆ ಸಲ್ಲಿಸಬಹುದು. ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇದ್ದರೆ ಅಂತಹ ದೂರುಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಅಧೀಕ್ಷಕರು ತಿಳಿಸಿದ್ದಾರೆ.

## ಪಠ್ಯಕ್ರಮದಲ್ಲಿ ಭಗವದ್ಗೀತೆ ಎಐಡಿಎಸ್‌ಓ ವಿರೋಧ

ದಾವಣಗೆರೆ, ಮಾ.27- ರಾಜ್ಯ ಸರ್ಕಾರವು ಶಾಲಾ ಪಠ್ಯಕ್ರಮದಲ್ಲಿ ಭಗವದ್ಗೀತೆಯನ್ನು ಸೇರಿಸಲು ಚಿಂತಿಸಿರುವ ಕುರಿತು ಎಐಡಿಎಸ್‌ಓ ರಾಜ್ಯಕಾರ್ಯದರ್ಶಿ ಅಜಯ್ ಕಾಮತ್ ತಮ್ಮ ಪ್ರತಿಕ್ರಿಯೆ ನೀಡಿದ್ದಾರೆ.

ಪ್ರಾಚೀನ ಶಿಕ್ಷಣ ವ್ಯವಸ್ಥೆಯು ನಮ್ಮ ದೇಶದ ಬಡವರು, ದಲಿತರು, ಶೋಷಿತರು ಮತ್ತು ಮಹಿಳೆಯರನ್ನೊಳಗೊಂಡು ಬಹುಸಂಖ್ಯಾತ ಜನತೆಯನ್ನು ಶತಮಾನಗಳ ಕಾಲ ಶಿಕ್ಷಣದಿಂದ ವಂಚಿತರನ್ನಾಗಿಸಿತ್ತು. ಕೇವಲ ಕೆಲವು ಜನ ಶ್ರೀಮಂತರು ಮತ್ತು ಮೇಲ್ಜಾತಿಯ ಪುರುಷರಿಗೆ ಸೀಮಿತವಾಗಿದ್ದ ಅಂದಿನ ಶಿಕ್ಷಣ ವ್ಯವಸ್ಥೆಯ ವಿರುದ್ಧ ಜ್ಯೋತಿ ಬಾಪುಲೆ, ಸಾವಿತ್ರಿಬಾಯಿ ಫುಲೆ, ಈಶ್ವರಚಂದ್ರ ವಿದ್ಯಾಸಾಗರ ಮತ್ತು ಕುದ್ಮಲ ರಂಗರಾಯರಂತಹ ಹಲವು ಮಹಾನ್ ವ್ಯಕ್ತಿಗಳು ಹೋರಾಡಿ ಎಲ್ಲರಿಗೂ ಶಿಕ್ಷಣವನ್ನು ಒದಗಿಸಲು ಶ್ರಮಿಸಿದರು. ಶಿಕ್ಷಣದಲ್ಲಿ ಧರ್ಮಕ್ಕೆ ಯಾವುದೇ ಪಾತ್ರವಿರಬಾರದೆಂದು ನೇತಾಜಿಯವರು ಪ್ರತಿಪಾದಿಸಿದ್ದಾರೆ ಮತ್ತು ಸಾಮಾಜಿಕ ನಿಯಮಗಳನ್ನು ರೂಪಿಸುವಲ್ಲಿ ಧರ್ಮಕ್ಕೆ ಯಾವುದೇ ಪಾತ್ರವಿಲ್ಲ ಎಂಬುದಾಗಿ ವಿವೇಕಾನಂದರು ಸಾರಿ ಹೇಳಿದ್ದಾರೆ.

ಆದರೆ ಇದಕ್ಕೆ ತದ್ವಿರುದ್ಧವಾಗಿ, ಧಾರ್ಮಿಕ ವಿಚಾರಗಳನ್ನು ಶಿಕ್ಷಣದಲ್ಲಿ ತೂರಿಸಲು ಹೊರಟಿರುವ ಸರ್ಕಾರವು ಈ ಎಲ್ಲ ಮಹಾನ್ ವ್ಯಕ್ತಿಗಳ ಆಶಯಗಳಿಗೆ ಕೊಳ್ಳಿಯಿಡುತ್ತಿದೆ. ಆ ಮೂಲಕ ನಾಗರಿಕತೆಯನ್ನೇ ಹಿಂದಕ್ಕೆ ತಳ್ಳುವ ಹುನ್ನಾರ ಇದಾಗಿದೆ. ಕ್ಷುಲ್ಲಕ ಚುನಾವಣಾ ರಾಜಕೀಯಕ್ಕಾಗಿ ರಾಜ್ಯದಲ್ಲಿ ಶೈಕ್ಷಣಿಕ ವಾತಾವರಣವನ್ನು ಹಾಳುಗೆಡವಲಾಗುತ್ತಿದೆ

ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆಯು ಸರ್ಕಾರದ ಈ ನಡೆಯನ್ನು ಖಂಡಿಸುತ್ತದೆ ಮತ್ತು ಕೂಡಲೇ ಇದನ್ನು ಕೈಬಿಡುವಂತೆ ಆಗ್ರಹಿಸುತ್ತದೆ. ಇಂತಹ ನೀತಿಗಳ ವಿರುದ್ಧ ಧ್ವನಿ ಎತ್ತಲು ಮನವಿ ಮಾಡುತ್ತದೆ ಎಂದು ಅವರು ತಿಳಿಸಿದ್ದಾರೆ.

## ಮಲೇಬೆನ್ನೂರಿನಲ್ಲಿ ಇಂದು ಪುರಸಭೆ ಬಜೆಟ್ ಸಭೆ

ಮಲೇಬೆನ್ನೂರಿನ ಪುರಸಭೆಯ 2022-23ನೇ ಸಾಲಿನ ಆಯವ್ಯಯ ಮಂಡನೆ ಸಭೆಯನ್ನು ಇಂದು ಬೆಳಿಗ್ಗೆ 11 ಕ್ಕೆ ಪುರಸಭೆ ಆಡಳಿತಾಧಿಕರಿಗಳೂ ಆದ ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ ಎಂದು ಮುಖ್ಯಾಧಿಕಾರಿ ಶ್ರೀಮತಿ ರುಕ್ಮಿಣಿ ತಿಳಿಸಿದ್ದಾರೆ.

# ಓದಿನ ಜೊತೆ ಸಾಮಾನ್ಯ ಜ್ಞಾನವೂ ಇರಲಿ

### ಸ.ಪ್ರ.ದ ಕಾಲೇಜಿನಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ನ್ಯಾ. ಪ್ರವೀಣ್ ನಾಯಕ್



ದಾವಣಗೆರೆ, ಮಾ. 27- ಓದುವ ಜೊತೆಗೆ ಸಾಮಾನ್ಯ ಜ್ಞಾನವನ್ನೂ ಬೆಳೆಸಿಕೊಳ್ಳಿ. ನಿತ್ಯದ ಆಗು-ಹೋಗುಗಳ ಬಗ್ಗೆ ಗಮನ ಹರಿಸಿ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರೂ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳೂ ಆದ ಪ್ರವೀಣ್ ನಾಯಕ್ ಸಲಹೆ ನೀಡಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ 'ನಿವೇದಿತ' ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸುತ್ತ ದಿನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರದಲ್ಲೂ ಪ್ರಗತಿ ಸಾಧಿಸುತ್ತಿದ್ದಾರೆ. ಶಾಲಾ-ಕಾಲೇಜುಗಳಲ್ಲಿ ಹೆಚ್ಚಿನ ರಾಂಕ್‌ಗಳು ಮಹಿಳೆಯರ ಪಾಲಾಗುತ್ತಿವೆ. ಉದ್ಯೋಗ ಗಿಟ್ಟಿಸಿಕೊಳ್ಳುವಲ್ಲಿಯೂ ಮಹಿಳೆಯರು ಮುಂಚೂಣಿಯಲ್ಲಿದ್ದಾರೆ. ಇದರೊಟ್ಟಿಗೆ ಮಹಿಳೆಯರು ಕಾನೂನುಗಳ ಬಗ್ಗೆಯೂ ತಿಳಿದಿರಬೇಕು ಎಂದು ಹೇಳಿದರು.

ಬಾಲ್ಯ ವಿವಾಹಗಳು ಕಡಿಮೆಯಾಗಿವೆಯಾದರೂ, ಕಳೆದ ಎರಡು ವರ್ಷಗಳಲ್ಲಿ ಕೊರೊನಾ ಹಿನ್ನೆಲೆಯಲ್ಲಿ ಬಾಲ್ಯವಿವಾಹಗಳು ಹೆಚ್ಚಾಗಿ ನಡೆದಿವೆ. ಬಾಲ್ಯವಿವಾಹ ನಡೆಸುವುದಷ್ಟೇ ಅಪರಾಧವಲ್ಲ. ನಡೆಯುವುದು ಗೊತ್ತಿದ್ದರೂ ಅದನ್ನು ತಡೆಯಲು ಮುದಾಗದೇ ಇರುವುದೂ ಅಪರಾಧವಾಗುತ್ತದೆ. ಆದ್ದರಿಂದ ಎಲ್ಲಿಯೇ ಬಾಲ್ಯವಿವಾಹ ನಡೆಯಲಿ, ಹತ್ತಿರದ ಪೊಲೀಸ್ ಠಾಣೆಗೆ ಅಥವಾ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಬೇಕು ಎಂದು ವಿದ್ಯಾರ್ಥಿನಿಯರಿಗೆ ಕರೆ ನೀಡಿದರು.

**ಪುರುಷರಿಗೂ ಮಹತ್ವದ ದಿನ :** ಮಹಿಳಾ ದಿನಾಚರಣೆ ಕೇವಲ ಮಹಿಳೆಯರಿಗಷ್ಟೇ ಅಲ್ಲ. ಪುರುಷರಿಗೂ ಮಹತ್ವದ ದಿನವಾಗಿದೆ. ಕಳೆದ ಕೆಲ ವರ್ಷಗಳಲ್ಲಿ ಮಹಿಳೆಯರು ಮಾಡಿದ ಸಾಧನೆಗಳನ್ನು ಪುರುಷರು ಮಾಡುತ್ತಿಲ್ಲ. ಇದರ ಬಗ್ಗೆ ಆತ್ಮ ವಿಮರ್ಶೆ ಅಗತ್ಯ ಎಂದರು.

ಅವರು ಪುರುಷರ ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ತಿಳಿದುಕೊಳ್ಳಲು ಅವರಿಗೂ ಒಂದು ದಿನ ಅಗತ್ಯವಿದೆ ಎಂದು ಅಭಿಪ್ರಾಯಿಸಿದರು.

'ಆಧುನಿಕ ಸಮಾಜದಲ್ಲಿ ಮಹಿಳೆಗಿರುವ ಸವಾಲುಗಳು' ಕುರಿತು, ಶಿವಮೊಗ್ಗದ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ರೇಖಾ ಜಿ.ಎಂ. ಉಪನ್ಯಾಸ ನೀಡಿದರು. ಕಾಲೇಜಿನ ಪ್ರಾಂಶುಪಾಲರಾದ ಶೈಲಜ ಎ.ಎಸ್. ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಮೈತ್ರಿ ಉಜ್ವಲ ಕೇಂದ್ರದ ಯೋಜನಾ ನಿರ್ದೇಶಕಿ ರೂಪಾ ಜಿ.ಎಂ. ಪ್ರಾಸ್ತಾವಿಕವಾಗಿ ಮಾತನಾಡಿದರು.

ದಾವಣಗೆರೆ ಸಿಂಡಿಕೇಟ್ ಸದಸ್ಯರಾದ ವಿಜಯಲಕ್ಷ್ಮಿ ಹಿರೇಮಠ, ವಕೀಲರ ಸಂಘದ ಜಿಲ್ಲಾಧ್ಯಕ್ಷ ಡಿ.ಪಿ. ಬಸವರಾಜ್ ಉಪಸ್ಥಿತರಿದ್ದರು.

ಉಪನ್ಯಾಸಕ ತೊಪ್ಪಲ ಕೆ. ಮಲ್ಲಿಕಾರ್ಜುನಗೌಡ ಸ್ವಾಗತಿಸಿದರು. ಪೂಜಾ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಸುನಿತಾ ಕೆ.ಬಿ. ನಿರೂಪಿಸಿದರು. ಶೃತಿ ರೆಡ್ಡಿ ವಂದಿಸಿದರು.

ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಪೊಲೀಸ್ ಇಲಾಖೆ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಶ್ರೀ ಮೈತ್ರಿ ಉಜ್ವಲ ಪುನರ್ವಸತಿ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

## ಧರಣಿ ನಿರತ ವಾಲ್ಮೀಕಿ ಶ್ರೀ ಭೇಟಿ ಮಾಡಿದ ಎಂ.ಪಿ.ವೀಣಾ ಮಹಾಂತೇಶ್



ಹರಪನಹಳ್ಳಿ, ಮಾ.27- ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ, ವಾಲ್ಮೀಕಿ ನಾಯಕ ಸಮುದಾಯಕ್ಕೆ ಶೇ 7.5 ಮೀಸಲಾತಿ ಹೆಚ್ಚಳ ಸೇರಿದಂತೆ, ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕೈಗೊಂಡಿರುವ ಧರಣಿ ಸತ್ಯಾಗ್ರಹಕ್ಕೆ ಕೆಪಿಸಿಸಿ ಮಾಧ್ಯಮ ವಿಶ್ಲೇಷಕರಾದ ಎಂ.ಪಿ.ವೀಣಾ ಮಹಾಂತೇಶ್ ಹಾಗೂ ಕೆಪಿಸಿಸಿ ವೈದ್ಯಕೀಯ ಘಟಕದ ರಾಜ್ಯ ಉಪಾಧ್ಯಕ್ಷ ಮಹಾಂತೇಶ್ ಚರಂತಿಮಠ್ ಭಾಗವಹಿಸಿ ಬೆಂಬಲ ವ್ಯಕ್ತ ಪಡಿಸಿದರು.

ಮರಿಯಮ್ಮನಹಳ್ಳಿ ಕಲಾವಿದೆ ನಾಗರತ್ನಮ್ಮ, ತಾಲ್ಲೂಕು ಯುವ ಕಾಂಗ್ರೆಸ್ ಉಪಾಧ್ಯಕ್ಷ ದಾದಾಪೀರ್ ಮಕರಬ್ಬಿ, ಮುಖಂಡರಾದ ಗಾಯತ್ರಮ್ಮ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಬಾಲಗೌರವ ಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಮಾ.27- ಕರ್ನಾಟಕ ಬಾಲವಿಕಾಸ ಅಕಾಡೆಮಿಯು ಕ್ರೀಡಾ ಕ್ಷೇತ್ರ, ನೃತ್ಯ ಕ್ಷೇತ್ರ, ಸಂಗೀತ ಕ್ಷೇತ್ರ, ಸಾಹಿತ್ಯ ಕ್ಷೇತ್ರ, ಕರಕುಶಲ ಕ್ಷೇತ್ರ, ಚಿತ್ರಕಲೆ ಕ್ಷೇತ್ರ, ಬಹುಮುಖ ಪ್ರತಿಭೆ, ನಾಟಕ ಕ್ಷೇತ್ರ ಹೀಗೆ 8 ಕ್ಷೇತ್ರಗಳಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಮಾಡಿದ ಅಸಾಧಾರಣ ಸಾಧನೆಗೈದ 18 ವರ್ಷದ ಒಳಗಿನ ಮಕ್ಕಳಿಂದ 'ಬಾಲಗೌರವ' ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿದೆ. ಅರ್ಜಿಯನ್ನು ಇದೇ ದಿನಾಂಕ 31 ರೊಳಗಾಗಿ ಯೋಜನಾಧಿಕಾರಿಗಳು, ಕರ್ನಾಟಕ ಬಾಲವಿಕಾಸ ಅಕಾಡೆಮಿ, ಚಂದ್ರಿಕಾ ಲೇಔಟ್ ಹಿಂಭಾಗ, ಕೆ.ಹೆಚ್.ಬಿ ಕಾಲೋನಿ, ಲಕಮನಹಳ್ಳಿ ಧಾರವಾಡ-580004 ಇಲ್ಲಿಗೆ ಕಳುಹಿಸಬೇಕು.

# ತೆಲಂಗಾಣ : ಇಂದು 1,800 ಕೋಟಿ ರೂ.ಗಳ ನರಸಿಂಹ ಸ್ವಾಮಿ ದೇವಾಲಯದ ಉದ್ಘಾಟನೆ



ಹೈದರಾಬಾದ್, ಮಾ. 27 – ತೆಲಂಗಾಣದಲ್ಲಿ ಸುಮಾರು 1,800 ಕೋಟಿ ರೂ. ವೆಚ್ಚದಲ್ಲಿ ಪುನರ್ ನಿರ್ಮಿಸಲಾಗಿರುವ ಶ್ರೀ ಲಕ್ಷ್ಮಿ ನರಸಿಂಹ ಸ್ವಾಮಿ ದೇವಾಲಯ ಸೋಮವಾರ ಉದ್ಘಾಟನೆಗೊಳ್ಳಲಿದೆ.

ಭುವನಗಿರಿ ಜಿಲ್ಲೆಯ ಯದಾದ್ರಿಯಲ್ಲಿ ನಿರ್ಮಿಸಲಾಗಿರುವ ಈ ದೇವಾಲಯ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರ ಕನಸಿನ ಯೋಜನೆಯಾಗಿದೆ. ಅವರ ಅಧ್ಯಾತ್ಮಿಕ ಗುರು ಚಿನ್ನ ಜೀಯರ್ ಸ್ವಾಮಿ ಅವರು ದೇವಾಲಯದ ಉದ್ಘಾಟನೆಗೆ ಮುಹೂರ್ತ ನಿಗದಿ ಪಡಿಸಿ ಕೊಟ್ಟಿದ್ದಾರೆ.

ಉದ್ಘಾಟನೆ ಅಂಗವಾಗಿ ಆಯೋಜಿಸಲಾಗಿರುವ ಮಹಾ ಸುದರ್ಶನ ಯಾಗ ಸೇರಿದಂತೆ ಹಲವಾರು ಧಾರ್ಮಿಕ ವಿಧಿ ವಿಧಾನಗಳಲ್ಲಿ ಮುಖ್ಯಮಂತ್ರಿ ರಾವ್ ಪಾಲ್ಗೊಳ್ಳಲಿದ್ದಾರೆ.

ಸುಮಾರು 100 ಎಕರೆ ಜಾಗದಲ್ಲಿ 1,048 ಯಗ್ನ ಕುಂಡಗಳಲ್ಲಿ ಮಹಾಯಾಗ ನೆರವೇರಲಿದೆ ಎಂದು ಈ ಹಿಂದೆ ತಿಳಿಸಲಾಗಿತ್ತು.

ಈ ದೇವಾಲಯ ಹೈದರಾಬಾದ್‌ನಿಂದ 80 ಕಿ.ಮೀ. ದೂರದಲ್ಲಿದೆ. 14.5 ಎಕರೆ ಪ್ರದೇಶದಲ್ಲಿರುವ ದೇವಾಲಯ ಸಂಕೀರ್ಣದ ನಿರ್ಮಾಣ 2016ರಲ್ಲಿ ಆರಂಭವಾಗಿತ್ತು.

## ಬಿಐಇಟಿ: ಸೌರ ಶಕ್ತಿ/ಹಸಿರು ಶಕ್ತಿ ಸಂಶೋಧನಾ ಯೋಜನೆ

ದಾವಣಗೆರೆ, ಮಾ.27- ಹೆಚ್ಚುತ್ತಿರುವ ಅನಿಲ ಇಂಧನ ಬೆಲೆಗಳು ಮತ್ತು ನಗರ ಚಾಲನೆಯಲ್ಲಿನ ಮಾಲಿನ್ಯ ಹಾಗೂ ಇಂಧನ ಉಳಿತಾಯದ ಅಗತ್ಯತೆಗಳಂತಹ ಪ್ರಮುಖ ಸಮಸ್ಯೆಗಳಿಗೆ ವಾಸ್ತವಿಕ ಪರಿಹಾರವನ್ನು ಪ್ರಸ್ತುತಪಡಿಸಲು, ಸೌರ ಶಕ್ತಿ/ಹಸಿರು ಶಕ್ತಿಯು ವಿದ್ಯುತ್ ಮತ್ತು ಹೈಬ್ರಿಡ್ ವಾಹನಗಳಿಗೆ ಕಾರ್ಯಸಾಧ್ಯವಾದ ಪರ್ಯಾಯ ಶಕ್ತಿಯಾಗಿದೆ.

ಈ ಸಂಬಂಧ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾದ ಡ್ಯೆ ಸೆನ್ಸಟೈಸ್ಡ್ ಹೈಬ್ರಿಡ್ ಸೋಲಾರ್ ಇ-ವಾಹನದ ವಿನ್ಯಾಸ ಮತ್ತು ಅಭಿವೃದ್ಧಿ ಕುರಿತ ಸಂಶೋಧನಾ ಯೋಜನೆಯ ಪ್ರಸ್ತಾವನೆಯು ವಿಟಿಯು ರಿಸರ್ಚ್ ಗ್ರ್ಯಾಂಟ್ ಸ್ಕೀಮ್-2021 ರ ಒಟ್ಟು ರೂ.12 ಲಕ್ಷಗಳ ಅನುದಾನವನ್ನು ಪಡೆದಿದೆ ಮತ್ತು ಬಿಐಇಟಿಯಿಂದ ರೂ.3 ಲಕ್ಷಗಳನ್ನು ನೀಡಿದೆ. ಬಿಐಇಟಿ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಡಾ. ಎ. ಜಿ. ಶಂಕರ ಮೂರ್ತಿ, ರೋವ್ ಲ್ಯಾಬ್ಸ್ ಪ್ರೈ ಲಿಮಿಟೆಡ್, ಬೆಂಗಳೂರು ಸಹಯೋಗದಲ್ಲಿ ಸಂಶೋಧನಾ ವರದಿ ಸಲ್ಲಿಸಿದೆ.

## ಗಣಕ ಯಂತ್ರ ಪರೀಕ್ಷೆ : ಫಲಿತಾಂಶ

ಮಲೇಬೆನ್ನೂರು, ಮಾ.27- ಪಟ್ಟಣದ ಈಶ್ವರ್ ಗಣಕಯಂತ್ರ ತರಬೇತಿ ಶಾಲೆಗೆ ಕಳೆದ ಜನವರಿ ತಿಂಗಳಲ್ಲಿ ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ನಡೆಸಿದ್ದ ಗಣಕಯಂತ್ರ ಆಫೀಸ್ ಆಟೋಮೇಷನ್ ಪರೀಕ್ಷೆಯಲ್ಲಿ ಶೇ.95.45 ರಷ್ಟು ಫಲಿತಾಂಶ ಬಂದಿದೆ ಎಂದು ಪ್ರಾಂಶುಪಾಲರಾದ ಬಿ.ಎನ್.ಅಂಬಿಕಾ ತಿಳಿಸಿದರು. ಪರೀಕ್ಷೆ ತೆಗೆದುಕೊಂಡಿದ್ದ ಒಟ್ಟು 129 ವಿದ್ಯಾರ್ಥಿಗಳ ಪೈಕಿ 123 ಮಂದಿ ತೇರ್ಗಡೆಯಾಗಿದ್ದಾರೆ. 23 ಅತ್ಯುನ್ನತ, 39 ಪ್ರಥಮ, 50 ದ್ವಿತೀಯ ಹಾಗೂ 11 ವಿದ್ಯಾರ್ಥಿಗಳು ಸಾಮಾನ್ಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

## ಪತ್ರಿಕಾ ವರದಿಗೆ ಸ್ಪಂದನೆ: ಗುಂಡಿ ತೋಡಿ ನೀರುಣಿಸಿದ ಪಾಲಿಕೆ





ದಾವಣಗೆರೆ, ಮಾ. 27- ಹದಡಿ ರಸ್ತೆಯಲ್ಲಿನ ಮಧ್ಯಭಾಗದ ಗಿಡಗಳ ಸುತ್ತ ಗುಂಡಿ ತೋಡಿ ಮಹಾನಗರ ಪಾಲಿಕೆಯಿಂದ ನೀರುಣಿಸಲಾಗಿದೆ.

ಮೊನ್ನೆ ನೀರು ನಿಲ್ಲದ ಸ್ಥಳದಲ್ಲಿಯೇ ನೀರು ಚೆಲ್ಲುತ್ತಾ ಹೋಗಿದ್ದ ಕ್ರಮಕ್ಕೆ ಹದಡಿ ರಸ್ತೆಯ ವ್ಯಾಪಾರಿಗಳು ಅಸಮಾಧಾನ ವ್ಯಕ್ತಪಡಿಸಿದ್ದರು. ಈ ಸುದ್ದಿ 'ಜನತಾವಾಣಿ' ಪತ್ರಿಕೆಯಲ್ಲೂ ಪ್ರಕಟಗೊಂಡಿತ್ತು. ಇದೀಗ ಎಚ್ಚೆತ್ತುಕೊಂಡ ಪಾಲಿಕೆ, ಗಿಡಗಳ ಬೇರುಗಳ ಬಳಿ ಚಿಕ್ಕ ಗುಂಡಿ ತೆಗೆದು, ಅಲ್ಲಿ ನೀರುಹಾಕುವ ಕಾರ್ಯಕ್ಕೆ ಮುಂದಾಗಿತ್ತು. ಪಾಲಿಕೆಯ ಕ್ರಮಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ.

## ವಿವಿಧ ಸಂಘಟನೆಗಳಿಂದ ಭಗತ್ ಸಿಂಗ್ ಹುತಾತ್ಮ ದಿನ

ದಾವಣಗೆರೆ, ಮಾ. 27- ಆಲ್ ಇಂಡಿಯಾ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್), ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಜೇಶನ್ (ಎಐಡಿವೈಓ), ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟುಡೆಂಟ್ ಆರ್ಗನೈಜೇಶನ್ (ಎಐಡಿಎಸ್‌ಓ) ಸಂಘಟನೆಗಳು ಜಂಟಿಯಾಗಿ ನಗರದ ರೈಲ್ವೆ ನಿಲ್ದಾಣದ ಮುಂಭಾಗದ ಭಗತ್ ಸಿಂಗ್ ಪುತ್ಥಳಿ ಬಳಿ ಭಗತ್ ಸಿಂಗ್ ಹುತಾತ್ಮ ದಿನವನ್ನು ಆಚರಿಸಿದವು.

ಎಐಡಿವೈಓ ಜಿಲ್ಲಾ ಸಂಚಾಲಕ ಪರಶುರಾಮ್, ಎಐಡಿಎಸ್‌ಓ ಜಿಲ್ಲಾ ಕಚೇರಿ ಕಾರ್ಯದರ್ಶಿ ಕಾವ್ಯ, ಎಐಎಂಎಸ್‌ಎಸ್ ಜಿಲ್ಲಾ ಕಾರ್ಯದರ್ಶಿ ಭಾರತಿ, ಪೂಜಾ ನಂದಿಹಳ್ಳಿ ಮಾತನಾಡಿದರು. ಯುವಜನ ಸಂಘಟನೆಯ ಅಧ್ಯಕ್ಷ ಅನಿಲ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಭಾರತಿ, ಕವಿತ, ಕಾವ್ಯ, ಪುಷ್ಪ, ಹನುಮಂತು, ಶಿವು, ಅಭಿಷೇಕ್, ಪರಶುರಾಮ್, ಅನಿಲ್ ಕುಮಾರ್, ಮನು ಕುಮಾರ್, ಶಶಿಕುಮಾರ್, ಗುರುಪ್ರಸಾದ್, ತಿಪ್ಪೇಸ್ವಾಮಿ, ಡಾ. ಸುನೀತ್ ಕುಮಾರ್, ನಾಗಜ್ಯೋತಿ, ಸ್ಮಿತಾ, ಮಂಜುನಾಥ ರೆಡ್ಡಿ ಮತ್ತಿತರರು ಪಾಲ್ಗೊಂಡಿದ್ದರು.

## ರಾಷ್ಟ್ರೀಯ ಭಾವೈಕ್ಯತಾ ಶಿಬಿರ ಹಾಗೂ ಯೂತ್ ಫೆಸ್ಟಿವಲ್‌ಗೆ ಆಯ್ಕೆ




ರಾಣೇಬೆನ್ನೂರು, ಮಾ.27- ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್ನೆಸ್ಸೆಸ್ ಸ್ವಯಂ ಸೇವಕರಾದ ಕುಮಾರಿ ಶ್ವೇತಾ ನಂದಿಹಳ್ಳಿ ಇವರು ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಭಾವೈಕ್ಯತಾ ಶಿಬಿರದಲ್ಲಿ ಹಾಗೂ ಕುಮಾರ ಸುನಿಲ್ ಘಟರೆಡ್ಡಿ ಬಾಗಲಕೋಟೆಯಲ್ಲಿ ನಡೆದ ರಾಜ್ಯಮಟ್ಟದ ಯೂತ್ ಫೆಸ್ಟಿವಲ್ ನಲ್ಲಿ ಭಾಗವಹಿಸಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿದ್ದಾರೆ.

## ಹರಪನಹಳ್ಳಿಯಲ್ಲಿ ಸಿಇಟಿ ತರಬೇತಿ

ಹರಪನಹಳ್ಳಿ, ಮಾ.27- ಟಿಇಟಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಲಿರುವ ಕಲ್ಯಾಣ ಕರ್ನಾಟಕ ಭಾಗದ ಆಕಾಂಕ್ಷಿಗಳಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಸಹಯೋಗದಲ್ಲಿ ಉಚಿತ ಸಿಇಟಿ ತರಬೇತಿ ಏಪ್ರಿಲ್ 1 ರಿಂದ 42 ದಿನಗಳ ಕಾಲ ಪಟ್ಟಣದಲ್ಲಿ ಹಮ್ಮಿಕೊಳ್ಳಲಾಗಿದೆ.

ವಿವರಕ್ಕೆ ಸಿಇಟಿ ಪರೀಕ್ಷಾ ನೋಡಲ್ ಅಧಿಕಾರಿ ಎಸ್ . ನಾಗರಾಜ (7022157679) ಅವರನ್ನು ನಾಳೆಯೊಳಗೆ ಸಂಪರ್ಕಿಸಿ.

## ಇಂದು, ನಾಳೆ ಕಟ್ಟಡ ನಿರ್ಮಾಣ ಕಾರ್ಮಿಕರ ಮುಷ್ಕರ

ಕೇಂದ್ರ ಕಾರ್ಮಿಕ ಸಂಘಟನೆಗಳ ಮುಷ್ಕರ ಬೆಂಬಲಿಸಿ ಇಂದು ಮತ್ತು ನಾಳೆ ರಾಜ್ಯದಲ್ಲಿಯೂ ಕಟ್ಟಡ ನಿರ್ಮಾಣ ಕಾರ್ಮಿಕರು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ನೇತೃತ್ವದಲ್ಲಿ ಕೆಲಸವನ್ನು ಸ್ಥಳಿತಗೊಳಿಸಿ ಎರಡು ದಿನಗಳ ಮುಷ್ಕರ ನಡೆಸಲಿದ್ದಾರೆ.

ಕೇಂದ್ರ ಸರ್ಕಾರ ರದ್ದು ಮಾಡಿರುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಾನೂನು ಹಾಗೂ ಸೆಸ್ ಕಾನೂನು 1996 ಪುನರ್ ಸ್ಥಾಪಿಸಬೇಕು. ದೇಶಾದ್ಯಂತ ಕಾನೂನುಬದ್ಧವಾಗಿ ರಚನೆಯಾಗಿರುವ ಕಟ್ಟಡ ನಿರ್ಮಾಣ ಕಲ್ಯಾಣ ಮಂಡಳಿ ಉಳಿಯಬೇಕು.

ನಿರಂತರವಾಗಿ ಏರಿಕೆಯಾಗುತ್ತಿರುವ ಕಟ್ಟಡ ಸಾಮಗ್ರಿಗಳ ಬೆಲೆಗಳನ್ನು ನಿಯಂತ್ರಣ ಮಾಡಬೇಕು ಹಾಗೂ ಕಟ್ಟಡ ಸಾಮಗ್ರಿಗಳ ಮೇಲೆ ವಿಧಿಸಲಾಗುತ್ತಿರುವ ಜಿ.ಎಸ್.ಟಿ ಕಡಿತಗೊಳಿಸಬೇಕು. ಇತ್ಯಾದಿ ಬೇಡಿಕೆಗಳ ಈಡೇರಿಕೆಗಾಗಿ ಮುಷ್ಕರಕ್ಕೆ ಕರೆ ನೀಡಲಾಗಿದೆ

ಇಂದು ಕೆಲಸದ ಸ್ಥಳಗಳಲ್ಲಿ, ಗ್ರಾಮ ಪಂಚಾಯ್ತಿ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ನಾಳೆ ಇತರೆ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ನೇತೃತ್ವದಲ್ಲಿ ಎಲ್ಲ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸಿ ಕೇಂದ್ರ ಮತು ರಾಜ್ಯ ಸರ್ಕಾರಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ್ ತಿಳಿಸಿದ್ದಾರೆ.

# ಚಿಂತನ ಪ್ರತಿಷ್ಠಾನದ ನಾಲ್ವರಿಗೆ ಪ್ರಶಸ್ತಿ



ಹರಿಹರ, ಮಾ.27- ಕನ್ನಡ ಸಾಹಿತ್ಯ ಪರಿಷತ್ತು ಮುಂಬರುವ ದಿನಗಳಲ್ಲಿ ಸಾಹಿತ್ಯಿಕ ಚಟುವಟಿಕೆಗಳನ್ನು ಹಮ್ಮಿಕೊಂಡು ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವ ಗುರಿ ಹೊಂದಿದೆ ಎಂದು ತಾಲ್ಲೂಕು ಕಸಾಪ ಘಟಕದ ಅಧ್ಯಕ್ಷ ಡಿ.ಎಂ.ಮಂಜುನಾಥಯ್ಯ ತಿಳಿಸಿದರು.

ನಗರದ ಚಿಂತನ ಪ್ರತಿಷ್ಠಾನದ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಸ್ನೇಹಕೂಟ ಕಾರ್ಯಕ್ರಮದಲ್ಲಿ ಮಾತನಾಡಿ, ಚಿಂತನ ಪ್ರತಿಷ್ಠಾನದ ಅಧ್ಯಕ್ಷ ಸುಬ್ರಹ್ಮಣ್ಯ ನಾಡಿಗೇರ್ ಅವರಿಗೆ ಮೈಸೂರಿನ ಪ್ರತಿಷ್ಠಿತ ರಾಜ್ಯಮಟ್ಟದ ಹೊಯ್ಸಳ ಕನ್ನಡ ಪ್ರಶಸ್ತಿ, ಸುಕ್ಷೇತ್ರ ಅಟವಿ ಪ್ರಶಸ್ತಿ, ಕಾರ್ಯದರ್ಶಿ ಡಿ.ಫ್ರಾನ್ಸಿಸ್ ಅವರಿಗೆ ಸಾಗರದ ಸಾಗರ ಸುತ್ತ ಪತ್ರಿಕೆ, ಸಹೃದಯ ಬಳಗ, ಇತಿಹಾಸ ವೇದಿಕೆ ಬಹುಮುಖ ಪ್ರತಿಭೆ ಪ್ರಶಸ್ತಿ ಮತ್ತು ಸುಕ್ಷೇತ್ರ ಅಟವಿ ಪ್ರಶಸ್ತಿ, ಶ್ರೀಮತಿ ಮಂಜಮ್ಮ ಮತ್ತು ಶ್ರೀಮತಿ ವಸಂತಿ. ಡಿ.ಫ್ರಾನ್ಸಿಸ್ ಅವರಿಗೆ ತುಮಕೂರಿನ ಬಸವ ಯೋಗಿಗಳ ಸುಕ್ಷೇತ್ರ ಅಟವಿ ಕೊಡ ಮಾಡುವ ರಾಜ್ಯಮಟ್ಟದ ಸಮಾಜ ಸೇವಾ ಪ್ರಶಸ್ತಿ ಬಂದಿರುವುದು ಹರಿಹರದ ಸಾಹಿತ್ಯ ಲೋಕಕ್ಕೆ ಮೆರಗು ತಂದಿದೆ ಎಂದರು.

ಸ್ನೇಹಕೂಟದಲ್ಲಿ ಕಾರ್ಮಿಕ ಮುಖಂಡರಾದ ಹೆಚ್.ಕೆ.ಕೊಟ್ರಪ್ಪ, ಸಾಹಿತ್ಯ ಸಂಗಮ ಅಧ್ಯಕ್ಷ ವಿ.ಬಿ. ಕೊಟ್ರೇಶಪ್ಪ, ಶಿಕ್ಷಕ ರಾಜಶೇಖರ ರೆಡ್ಡಿ, ಶ್ರೀಮತಿ ಎ.ಬಿ. ಮಂಜಮ್ಮ, ಶ್ರೀಮತಿ ವಸಂತಿ.ಡಿ.ಫ್ರಾನ್ಸಿಸ್, ಹವ್ಯಾಸಿ ಬರಹಗಾರ ಹರವೇ ಪ್ರಕಾಶ್ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಸ್ನೇಹಕೂಟದಲ್ಲಿ ನೂತನವಾಗಿ ಕಸಾಪ ತಾಲ್ಲೂಕು ಅಧ್ಯಕ್ಷರಾಗಿ ನೇಮಕಗೊಂಡಿರುವ ಡಿ.ಎಂ. ಮಂಜುನಾಥಯ್ಯ ಅವರನ್ನು ಚಿಂತನ ಪ್ರತಿಷ್ಠಾನದ ವತಿಯಿಂದ ಗೌರವಿಸಿ ಸನ್ಮಾನಿಸಲಾಯಿತು.

ಕಸಾಪ ತಾಲ್ಲೂಕು ಘಟಕದ ಗೌ.ಕಾರ್ಯದರ್ಶಿ ಮತ್ತು ಜನತಾವಾಣಿ ವರದಿಗಾರ ಚಿದಾನಂದ ಕಂಚಿಕೇರಿ ಮತ್ತು ಸಮಾಜ ಸೇವಕ ಸೈಯದ್ ಅಹ್ಮದ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಶ್ರೀಮತಿ ನಾಗರತ್ನ ಮತ್ತು ಶ್ರೀಮತಿ ಸೌಮ್ಯ ರಾಮಕೃಷ್ಣ ಪ್ರಾರ್ಥಿಸಿದರು. ಡಿ.ಫ್ರಾನ್ಸಿಸ್ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸುಬ್ರಹ್ಮಣ್ಯ ನಾಡಿಗೇರ್ ವಂದಿಸಿದರು.



ಹೃತ್ಪೂರ್ವಕ ಅಭಿನಂದನೆಗಳು



ಸಹಕಾರ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಅನುಪಮ ಸೇವೆಗಾಗಿ ಕರ್ನಾಟಕ ಸರ್ಕಾರವು ಕೊಡಮಾಡುವ **'ಸಹಕಾರ ರತ್ನ'** ಪ್ರಶಸ್ತಿಗೆ ಭಾಜನರಾಗಿರುವ ದಾವಣಗೆರೆ ಜಿಲ್ಲೆಯ ಹಿರಿಯ ಸಹಕಾರಿ ಧುರೀಣರಾದ

**ಡಾ|| ಶ್ರೀ ಜೆ.ಆರ್. ಷಣ್ಮುಖಪ್ಪ**

ಅವರುಗಳಿಗೆ ಹೃದಯಪೂರ್ವಕ ಅಭಿನಂದನೆಗಳು.


ಹೆಚ್. ಮೃತ್ಯುಂಜಯಪ್ಪ
ಅಧ್ಯಕ್ಷರು


ಜೆ.ಸಿ. ಹನುಮಂತಪ್ಪ
ಉಪಾಧ್ಯಕ್ಷರು


ಬಿ.ಆರ್. ವೀರಪ್ಪ
ಮಾಜಿ ಅಧ್ಯಕ್ಷರು
ಹಾಲಿ ನಿರ್ದೇಶಕರು


ಕೆ.ಎಂ. ರೇವಣಸಿದ್ದಪ್ಪ
ಮಾಜಿ ಅಧ್ಯಕ್ಷರು
ಹಾಲಿ ನಿರ್ದೇಶಕರು


ಹೆಚ್. ಪರಮೇಶ್ವರಪ್ಪ
ಮಾಜಿ ಅಧ್ಯಕ್ಷರು
ಹಾಲಿ ನಿರ್ದೇಶಕರು


ಟಿ. ಮಂಜುನಾಥ್
ಮಾಜಿ ಅಧ್ಯಕ್ಷರು
ಹಾಲಿ ನಿರ್ದೇಶಕರು


ಟಿ.ಎಂ. ಬಸವರಾಜ್
ಮಾಜಿ ಉಪಾಧ್ಯಕ್ಷರು
ಹಾಲಿ ನಿರ್ದೇಶಕರು


ಟಿ. ರಾಜಣ್ಣ
ನಿರ್ದೇಶಕರು


ಶ್ರೀಮತಿ ರೇಖಾ ಷಣ್ಮುಖಪ್ಪ
ನಿರ್ದೇಶಕರು


ಶ್ರೀಮತಿ ಪುಷ್ಪ ಕೋಂ. ಮೂರ್ತಿ ಎಸ್.ಎನ್.
ನಿರ್ದೇಶಕರು


ಶ್ರೀಕೃಷ್ಣ
ನಿರ್ದೇಶಕರು


ಟಿ. ಮಂಜುನಾಥ್
ನಿರ್ದೇಶಕರು


ಟಿ.ಎನ್. ದಿಳ್ಳೆಪ್ಪ
ನಿರ್ದೇಶಕರು


ಟಿ.ಕೆ. ಶಿವಪ್ಪ
ಕಾರ್ಯದರ್ಶಿ

ದಾವಣಗೆರೆ ತಾಲ್ಲೂಕು ವ್ಯವಸಾಯೋತ್ಪನ್ನಗಳ ಮಾರಾಟ ಸಹಕಾರ ಸಂಘ ನಿ.,
ಆರ್.ಎಂ.ಸಿ. ರಸ್ತೆ, ದಾವಣಗೆರೆ. ಫೋ. : 08192-254435

# ಕಾನೂನು ಪರಿಣಾಮಕಾರಿಯಾಗಿ ಜಾರಿಯಾದರೆ ಶೋಷಣೆ ತಡೆ ಸಾಧ್ಯ



**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ**

ದಾವಣಗೆರೆ, ಮಾ.27- ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರದಿದ್ದರೆ ಸಮಾಜದಲ್ಲಿನ ಶೋಷಣೆಗಳನ್ನು ತಡೆಯುವುದು ಅಸಾಧ್ಯ ಎಂದು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ಹೇಳಿದರು.

ನಿಟುವಳ್ಳಿಯ ರಾಷ್ಟ್ರೋತ್ಥಾನ ಕೇಂದ್ರದ ಸಭಾಂಗಣದಲ್ಲಿ ಅಖಿಲ ಭಾರತೀಯ ಅಧಿವಕ್ತ ಪರಿಷತ್ ಜಿಲ್ಲಾ ಶಾಖೆಯಿಂದ ನಿನ್ನೆ ಏರ್ಪಡಿಸಿದ್ದ 'ವಿಶ್ವ ಮಹಿಳಾ ದಿನಾಚರಣೆ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಭಾರತ ಪುರುಷ ಪ್ರಧಾನ ಸಮಾಜವಾಗಿದ್ದು, ಹಿಂದಿನಿಂದಲೂ ಕೌಟುಂಬಿಕ ದೌರ್ಜನ್ಯ, ಶೋಷಣೆ, ಅತ್ಯಾಚಾರ, ಭ್ರೂಣಹತ್ಯೆ ಮುಂತಾದ ಪ್ರಕರಣಗಳು ನಡೆಯುತ್ತಲೇ ಇವೆ. ಸಂವಿಧಾನ ಬದ್ಧ ಕಾಯ್ದೆಗಳನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತರುವುದಲ್ಲದೇ, ಕಡ್ಡಾಯವಾಗಿ ಪಾಲನೆ ಮಾಡಿದರೆ, ಸಮಾಜದಲ್ಲಿ ನಡೆಯುವ ಇಂತಹ ಪ್ರಕರಣಗಳನ್ನು ತಡೆಯಬಹುದು ಎಂದರು.

ದೇಶಕ್ಕೆ ಕೊಡುಗೆ ನೀಡಿದ, ಸಮಾಜಕ್ಕೆ ಮಾದರಿಯಾದ ಮಹಿಳೆಯರನ್ನು ನೆನೆಯಲು ವಿಶ್ವ ಮಹಿಳಾ ದಿನವನ್ನು ಆಚರಿಸುವ ಮೂಲಕ ಗೌರವಿಸಲಾಗುತ್ತದೆ ಎಂದು ಹೇಳಿದರು.ಹಿಂದೆಂದಿಗಿಂತಲೂ ಇಂದು ಮಹಿಳೆ ಬಲಿಷ್ಠಳಾಗಿದ್ದು, ಎಲ್ಲಾ ಕ್ಷೇತ್ರಗಳಲ್ಲಿ ಹೆಚ್ಚಿನ ಸಾಧನೆ ಮಾಡುತ್ತಿದ್ದಾಳೆ. ಆದರೂ ವರದಕ್ಷಿಣೆ ಕಿರುಕುಳ, ಲೈಂಗಿಕ ದೌರ್ಜನ್ಯ, ಮಹಿಳೆ ಮತ್ತು ಮಕ್ಕಳ ಮೇಲೆ ಅತ್ಯಾಚಾರ ಪ್ರಕರಣಗಳು ನಡೆಯುತ್ತಲೇ ಇವೆ. ಇವುಗಳಿಗೆ ಕಡಿವಾಣ ಹಾಕಬೇಕಾಗಿದೆ. ಇಂತಹ ಪ್ರಕರಣಗಳು ಜರುಗಿದ ತಕ್ಷಣ ವರದಿ ಮಾಡಬೇಕು. ಯಾವುದೇ ಕಾರಣಕ್ಕೂ ಮುಚ್ಚಿ ಹಾಕುವ ಪ್ರಯತ್ನ ಮಾಡಬಾರದು ಎಂದರು.

ಕಾನೂನುಗಳನ್ನು ಗೌರವಿಸುವ ಜೊತೆಗೆ ಈ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು. ಅನ್ಯಾಯದ ವಿರುದ್ಧ ಪ್ರಶ್ನಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಒಂದನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾದ ವಿಜಯಾನಂದ್ ಮಾತನಾಡಿ, ಸಮಾಜದಲ್ಲಿರುವ ಕೊರತೆಗಳನ್ನು ಸರಿಪಡಿಸಿಕೊಂಡು ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಪ್ರಯತ್ನ ಮಾಡಬೇಕೆಂದರು. ಕಾನೂನುಗಳು ಕೇವಲ ಪುಸ್ತಕಗಳಿಗೆ ಸೀಮಿತವಾಗದೇ ಕಟ್ಟುನಿಟ್ಟಾಗಿ ಪಾಲಿಸಬೇಕಾಗಿದೆ ಮತ್ತು ಗೌರವಿಸಬೇಕಾಗಿದೆ. ಸಾಮಾಜಿಕವಾಗಿ ಬದಲಾವಣೆ ಸಹ ಆಗಬೇಕಾಗಿದೆ ಎಂದರು.

ಅಖಿಲ ಭಾರತೀಯ ಅಧಿವಕ್ತ ಪರಿಷತ್ ಜಿಲ್ಲಾಧ್ಯಕ್ಷ ಎಲ್. ದಯಾನಂದ ಅಧ್ಯಕ್ಷತೆ ವಹಿಸಿದ್ದರು. ಪರಿಷತ್ ರಾಜ್ಯ ಉಪಾಧ್ಯಕ್ಷ ಕಾಕನೂರು ವೈ. ಮಂಜಪ್ಪ, ಜಿಲ್ಲಾ ಕಾರ್ಯದರ್ಶಿ ವಸಂತಕುಮಾರ್ ಉಪಸ್ಥಿತರಿದ್ದರು.

ಶ್ರೀಮತಿ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಅನಿತಾ ದೊಡ್ಡಗೌಡರ್ ವಿಶೇಷ ಉಪನ್ಯಾಸ ನೀಡಿದರು. ಹಿರಿಯ ವಕೀಲರಾದ ಜ್ಯೋತಿ ಪ್ರಾರ್ಥಿಸಿದರು, ರೇಖಾ ಸ್ವಾಗತಿಸಿದರು. ಸಿ.ಪಿ. ಅನಿತಾ ಪ್ರಾಸ್ತಾವಿಕವಾಗಿ ಮಾತನಾಡಿದರು.

## ರಾಜ್ಯದ ಆರು ಕಡೆ ಚಿತ್ರಕಲಾ ಗ್ಯಾಲರಿ : ಸಿಎಂ ಬೊಮ್ಮಾಯಿ

ಬೆಂಗಳೂರು, ಮಾ. 27 – ರಾಜ್ಯದ ಆರು ಕಡೆಗಳಲ್ಲಿ ಚಿತ್ರಕಲಾ ಗ್ಯಾಲರಿಗಳನ್ನು ಸ್ಥಾಪಿಸಲಾಗುವುದು ಎಂದು ಸಿಎಂ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಚಿತ್ರ ಕಲಾ ಪರಿಷತ್ ಸ್ವಾಯತ್ತ ಸಂಸ್ಥೆಯಾಗಿದೆ. ಇದನ್ನು ಡೀಮ್ಡ್ ವಿಶ್ವವಿದ್ಯಾನಿಲಯ ಮಾಡಬೇಕೆಂಬ ಬೇಡಿಕೆ ಇದೆ. ಈ ದಿಸೆಯಲ್ಲಿ ಮುಂದಿನ ವಿಧಾನಸಭಾ ಅಧಿವೇಶನದಲ್ಲಿ ಮಸೂದೆ ಮಂಡಿಸಲು ಕಾರ್ಯ ನಿರ್ವಹಿಸಲಾಗುವುದು ಎಂದು ಬೊಮ್ಮಾಯಿ ಹೇಳಿದ್ದಾರೆ. ಚಿತ್ರಕಲಾ ಪರಿಷತ್ ಆಯೋಜಿಸಿದ್ದ ಚಿತ್ರಸಂತೆಯಲ್ಲಿ ಪಾಲ್ಗೊಡು ಮಾತನಾಡುತ್ತಿದ್ದ ಅವರು, ಚಿತ್ರ ಸಂತೆ ಪರಿಕಲ್ಪನೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

# ಮೀಸಲಾತಿ ಹೆಚ್ಚಳ ಮಾಡದಿದ್ದರೆ, ಬೃಹತ್ ಪ್ರತಿಭಟನೆ



**ಹರಪನಹಳ್ಳಿ : ವಾಲ್ಮೀಕಿ ಸಮಾಜದ ಸಭೆಯಲ್ಲಿ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಧರ್ಮದರ್ಶಿ ಜಂಬಯ್ಯನಾಯಕ ಎಚ್ಚರಿಕೆ**

ಹರಪನಹಳ್ಳಿ, ಮಾ.27- ಶ್ರೀ ಪ್ರಸನ್ನಾನಂದ ಸ್ವಾಮೀಜಿಯವರು ಮೀಸಲಾತಿ ಹೆಚ್ಚಳದ ಪ್ರತಿ ನಮ್ಮ ಕೈ ಸೇರಿದ ಮೇಲೆಯೇ ನಾನು ರಾಜಧಾನಿ ಬಿಟ್ಟು ರಾಜನಹಳ್ಳಿಗೆ ಹೋಗುತ್ತೇನೆ ಎಂದು ಪಟ್ಟು ಹಿಡಿದಿದ್ದಾರೆ ಎಂದು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಧರ್ಮದರ್ಶಿ ಜಂಬಯ್ಯನಾಯಕ ಹೇಳಿದರು.

ಪಟ್ಟಣದ ವಾಲ್ಮೀಕಿ ನಗರದ ದೊಡ್ಡಗರಡಿ ಕೇರಿಯ ಸಮುದಾಯ ಭವನದಲ್ಲಿ ಜರುಗಿದ ಮೀಸಲಾತಿ ಹೆಚ್ಚಳ ಕುರಿತು ನಡೆದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪರಿಶಿಷ್ಟ ಪಂಗಡಕ್ಕೆ ಕೂಡಲೇ ಮೀಸಲಾತಿ ಹೆಚ್ಚಿಸದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಅವರು ಎಚ್ಚರಿಸಿದರು.

ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ಮಾತನಾಡಿ, ವಾಲ್ಮೀಕಿ ನಾಯಕ ಸಮುದಾಯಕ್ಕೆ ಮೀಸಲಾತಿ ನೀಡಲು ಸರ್ಕಾರ ಮೀನಾಮೇಷ ಎಣಿಸುತ್ತಿರುವುದು ಖಂಡನೀಯ ಎಂದರು. ವಾಲ್ಮೀಕಿ ನಾಯಕ ಸಮಾಜಕ್ಕೆ ಮೀಸಲಾತಿ ಹೆಚ್ಚಳ ವಿಳಂಬವಾಗಲು ಸರ್ಕಾರ ಹಾಗೂ ಮೀಸಲಾತಿಯಿಂದ ಗೆದ್ದ ಶಾಸಕರ, ಸಚಿವರ ಇಚ್ಛಾಶಕ್ತಿಯ ಕೊರತೆ ಕಾರಣವಾಗಿದ್ದು, ನಾಗಮೋಹನ್‌ದಾಸ್ ವರದಿ ಅನುಷ್ಠಾನಗೊಳಿಸುವಂತೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮಾರ್ಚ್ 30 ರಂದು ಜರುಗುವ ರಾಜ್ಯ ಮಟ್ಟದ ವಿಶೇಷ ಸಭೆಗೆ ತಾಲ್ಲೂಕಿನ ಸಮಾಜದ ಬಂಧುಗಳು ಭಾಗವಹಿಸಬೇಕು ಎಂದು ಮನವಿ ಮಾಡಿದರು.

ವಾಲ್ಮೀಕಿ ಜಾತ್ರಾ ಸಮಿತಿ ತಾಲ್ಲೂಕು ಅಧ್ಯಕ್ಷ ಆಲದಹಳ್ಳಿ ಷಣ್ಮುಖಪ್ಪ ಹಾಗೂ ನಿವೃತ್ತ ಮುಖ್ಯ ಶಿಕ್ಷಕ ಆನಂದಪ್ಪ ಮಾತನಾಡಿ, ರಾಜ್ಯದಲ್ಲಿಯೇ 4ನೇ ಅತಿ ದೊಡ್ಡ ವಾಲ್ಮೀಕಿ ನಾಯಕ ಸಮಾಜದ ಜನಸಂಖ್ಯೆಗೆ ಅನುಗುಣವಾಗಿ ಶೇ.7.5 ಕ್ಕಿಂತ ಹೆಚ್ಚಿನ ಮೀಸಲಾತಿ ನೀಡುವಂತೆ ಒತ್ತಾಯಿಸಿ ಕಳೆದ 46 ದಿನಗಳಿಂದ ಶ್ರೀಗಳು ಧರಣಿ ಸತ್ಯಾಗ್ರಹ ನಡೆಸುತ್ತಿದ್ದರೂ ಸರ್ಕಾರ ಮೌನ ವಹಿಸಿದ್ದು, ಶ್ರೀಗಳ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ ಎಂದರು,

ಪಂಚಾಯಿತಿ ಮಾಜಿ ಅಧ್ಯಕ್ಷ ಲಕ್ಕಳ್ಳಿ ಹನುಮಂತಪ್ಪ, ಬಿಜೆಪಿ ಎಸ್.ಟಿ ಘಟಕದ ತಾಲ್ಲೂಕು ಅಧ್ಯಕ್ಷ ಟಿ. ಮನೋಜ್, ವಾಲ್ಮೀಕಿ ನಾಯಕ ಸಮಾಜದ ಸಂಘಟನಾ ಕಾರ್ಯದರ್ಶಿ ತಿಮ್ಮೇಶ, ನ್ಯಾಯವಾದಿಗಳಾದ ಕೆ.ಎಂ. ಪ್ರಾಣೇಶ, ಜಿಟ್ಟಿನಕಟ್ಟಿ ಮಂಜುನಾಥ. ರೈತ ಸಂಘದ ದ್ಯಾಮಜ್ಜಿ ಹನುಮಂತಪ್ಪ, ಏಕಲವ್ಯ ಸಂಘರ್ಷ ಸಮಿತಿ ಅಧ್ಯಕ್ಷ ರಾಯದುರ್ಗದ ಪ್ರಕಾಶ್, ಶಿಕ್ಷಕ ಹನುಮಂತಪ್ಪ, ವಾಲ್ಮೀಕಿ ನಾಯಕ ಮಹಿಳಾ ಘಟಕದ ಮಂಜುಳಾ, ಪವಿತ್ರ, ಶೋಭಾ, ಮುಖಂಡರುಗಳಾದ ಕವಸರ ನಾಗರಾಜ, ಹನುಮಂತಪ್ಪ, ದೊಡ್ಡಗರಡಿ ದೈವಸ್ಥರಾದ ಕಮ್ಮಾರ ದೊಡ್ಡಹಾಲಪ್ಪ, ಕೆ. ಅಂಜಿನಪ್ಪ, ಸಿ. ನಾಗರಾಜ, ಬಿ.ದುರುಗಪ್ಪ ಸೇರಿದಂತೆ ಇತರರು ಇದ್ದರು.

**ಸುಳ್ಳು ಜಾತಿ ಪ್ರಮಾಣ ಪತ್ರ**

## ವಾರದೊಳಗೆ ಕ್ರಮ ಕೈಗೊಳ್ಳದಿದ್ದರೆ ಪ್ರತಿಭಟನೆ

ದಾವಣಗೆರೆ, ಮಾ. 27- ತನ್ನ ಮಗಳ ಹೆಸರಿನಲ್ಲಿ ಬೇಡ ಜಂಗಮ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದಿರುವ ಹಿನ್ನೆಲೆಯಲ್ಲಿ ಒಂದು ವಾರದೊಳಗಾಗಿ ಶಾಸಕ ಎಂ.ಪಿ. ರೇಣುಕಾಚಾರ್ಯ ಮತ್ತವರ ಸಹೋದರ ದಾರುಕೇಶ್ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಬಂಧಿಸದಿದ್ದರೆ ವಿವಿಧ ಹಂತದ ಹೋರಾಟಗಳನ್ನು ನಡೆಸುವುದಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಎಫ್.ಹೆಚ್. ಜಕ್ಕಪ್ಪನವರ ಸುದ್ದಿಗೋಷ್ಠಿಯಲ್ಲಿ ಎಚ್ಚರಿಕೆ ನೀಡಿದರು.

ರಾಜ್ಯದಲ್ಲಿ ಸಾವಿರಾರು ಜನ ಬೇಡ ಜಂಗಮ ಹೆಸರಿನಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದಿದ್ದಾರೆ. ಈ ರೀತಿ ಮಾಡುವುದರಿಂದ ಎಸ್ಸಿ, ಎಸ್ಟಿ ಜನರಿಗೆ ಅನ್ಯಾಯವಾಗಲಿದೆ ಎಂದರು.

ಜಿಲ್ಲಾಧಿಕಾರಿಗಳು ಕೂಡಲೇ ಈ ಬಗ್ಗೆ ಗಮನ ಹರಿಸಿ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು. ಸಂವಿಧಾನದಡಿಯಲ್ಲಿ ಅವರನ್ನು ಶಿಕ್ಷಿಸಬೇಕೆಂದು ಆಗ್ರಹಿಸಿದರು.

ಬೇಡ ಜಂಗಮರ ಹೆಸರಿನಲ್ಲಿ ಪರಿಶಿಷ್ಟರ ಸವಲತ್ತುಗಳನ್ನು ಕಬಳಿಸುತ್ತಿದ್ದು, ಇದು ಬಸವಣ್ಣನವರಿಗೆ ಮಾಡಿದ ಅವಮಾನ. ಸರ್ಕಾರ ಕೂಡಲೇ ತನಿಖೆಗೆ ಆದೇಶಿಸಬೇಕು. ಈಗ ಪಡೆದಿರುವ ಜಾತಿ ಪ್ರಮಾಣ ಪತ್ರವನ್ನು ರದ್ದುಗೊಳಿಸಬೇಕೆಂದು ಒತ್ತಾಯಿಸಿದರು.

ನಕಲಿ ಜಾತಿ ಪ್ರಮಾಣ ಪತ್ರ ಪಡೆಯುವುದು ಅಕ್ಷಮ್ಯ ಅಪರಾಧ. ಶಾಸಕ ರೇಣುಕಾಚಾರ್ಯ ಅವರ ಪುತ್ರಿ ಚೇತನ ಅವರು ಬೆಂಗಳೂರು ಉತ್ತರ ತಾಲ್ಲೂಕಿನ ತಹಶೀಲ್ದಾರ್ ಕಚೇರಿಯಿಂದ ಬೇಡ ಜಂಗಮ ಜಾತಿ ಪ್ರಮಾಣ ಪಡೆದಿದ್ದಾರೆ. ಇವರಂತೆ ಸುಮಾರು 600 ಜನ ಜಾತಿ ಪ್ರಮಾಣ ಪತ್ರ ಪಡೆದಿದ್ದಾರೆ ಎಂದು ಮಾಹಿತಿ ನೀಡಿದರು. ರೇಣುಕಾಚಾರ್ಯ ಅವರಿಗೆ ನೈತಿಕತೆ ಇದ್ದರೆ ಕೂಡಲೇ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಆಗ್ರಹಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಕೆಪಿಸಿಸಿ ಎಸ್ಸಿ ವಿಭಾಗದ ಜಿಲ್ಲಾಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ, ಇತರೆ ಪದಾಧಿಕಾರಿಗಳಾದ ನಾಗರಾಜನಾಯ್ಕ, ರಾಮಯ್ಯ, ನಾಗರಾಜ್, ತಮ್ಮಣ್ಣ, ರಾಕೇಶ್, ಬಿ.ಎಂ. ಈಶ್ವರ್, ರಾಜೇಶ್ ನೇರ್ಲಿಗಿ, ಶೇಖರಪ್ಪ ಮತ್ತಿತರರಿದ್ದರು.

## ಜೇನುಗೂಡು ಮಹಿಳಾ ಸಮಾಜದ ಸಮೂಹ ಗಾನ ಸ್ಪರ್ಧೆ ವಿಜೇತರು



ದಾವಣಗೆರೆ,ಮಾ.27- ನಗರದ ಜೇನುಗೂಡು ಮಹಿಳಾ ಸಮಾಜದ ವಾರ್ಷಿಕೋತ್ಸವ ಮತ್ತು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ಸಂಘ-ಸಂಸ್ಥೆಗಳಿಗೆ ಜನಪದ ಸಮೂಹ ಗೀತೆ ಗಾಯನ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಸೌಮ್ಯ ಸತೀಶ್, ಪ್ರೀತಿ ಮಠದ, ಶಶಿಕಲಾ, ಮಧುಮತಿ, ಶಾಂತ. ಎರಡನೇ ಬಹುಮಾನವನ್ನು ಲಕ್ಷ್ಮಿ ಕೇಶವ, ಮಮತಾ ಕೊಟ್ರೇಶ್, ಸರಿತಾ, ಮಂಜುಳಾ ರಾಘವೇಂದ್ರ, ಪುಷ್ಪಾ ಹಾಗೂ ಮೂರನೇ ಬಹುಮಾನವನ್ನು ವಿಜಯ, ಸುಧಾ, ಮೀನಾಕ್ಷಿ, ಜ್ಯೋತಿ,ಮಂಗಳ ಪಡೆದರು

ಆಂಜನೇಯ ಬಡಾವಣೆ ಯೋಗ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜೇನುಗೂಡು ಮಹಿಳಾ ಸಮಾಜದ ಅಧ್ಯಕ್ಷೆ ಸುಜಾತ ನಾಗೇಶ್ ವಹಿಸಿದ್ದರು. ಕಾರ್ಯದರ್ಶಿ ಮಧು ಉಮೇಶ್, ತೀರ್ಪುಗಾರರಾಗಿ ವಿದುಷಿ ಶ್ರೀಮತಿ ಮಂಗಳ ಗೌರಿ ಆಗಮಿಸಿದ್ದರು. ಪ್ರಾರ್ಥನೆ ಎಂ. ಪ್ರೀತಿ., ಸ್ವಾಗತ ಶಾಂತಲಾ, ವಂದನೆ ಉಷಾ, ನಿರೂಪಣೆ ನವೀನ ಮಾಡಿದರು.

# ಭಾರತದ ಸಂಸ್ಕೃತಿ, ಆಚಾರ, ವಿಚಾರಗಳನ್ನು ಪಾಲಿಸುವ ಪಕ್ಷ ಬಿಜೆಪಿ



**ರಾಣೇಬೆನ್ನೂರಿನಲ್ಲಿನ ಬಿಜೆಪಿ ಪ್ರಕೋಷ್ಠಗಳ ಸಭೆಯಲ್ಲಿ ಪ್ರಕೋಷ್ಠಗಳ ಸಂಯೋಜಕ ಡಾ. ಭಾನುಪ್ರಕಾಶ್**

ರಾಣೇಬೆನ್ನೂರು,ಮಾ.27- ದೇಶ ಅಪಾಯದ ಪರಿಸ್ಥಿತಿ ಎದುರಿಸುತ್ತಿದ್ದಾಗ ಜಯಪ್ರಕಾಶ ನಾರಾಯಣ ಅವರ ಆಣತಿಯಂತೆ ಜನತಾ ಪಕ್ಷ ಕಟ್ಟಲಾಯಿತು. ನಂತರ ಹುಟ್ಟಿಕೊಂಡ ಭಾರತೀಯ ಜನತಾ ಪಾರ್ಟಿ ನಾಲ್ಕು ದಶಕ ಕಳೆದರೂ ಹೋಳಾಗಿಲ್ಲ. ಹುಟ್ಟಿನಿಂದಲು ಒಗ್ಗಟ್ಟು ಕಾಯ್ದುಕೊಂಡಿದೆ ಎಂದು ಪ್ರಕೋಷ್ಠಗಳ ಸಂಯೋಜಕ ಡಾ. ಭಾನುಪ್ರಕಾಶ್ ಹೇಳಿದರು.

ಪೂರ್ವಿಕಾ ಮಹಲ್‌ನಲ್ಲಿ ನಡೆದ ಬಿಜೆಪಿ ಪ್ರಕೋಷ್ಠಗಳ ಸಭೆ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಒಟ್ಟು ನಮ್ಮಲ್ಲಿ 24 ಪ್ರಕೋಷ್ಠಗಳಿವೆ, ಎಲ್ಲವುಗಳಿಗೂ ನಿರ್ದಿಷ್ಟ ಗುರಿಯಿದೆ. ಜನಪರ ಚಿಂತನೆಯ ಈ ಗುರಿಗಳ ಬಗ್ಗೆ ಸಾಮೂಹಿಕ ಚರ್ಚೆ, ನಿರ್ಧಾರಗಳನ್ನು ಕೈಗೊಳ್ಳಲಾಗುತ್ತದೆ. ಬಿಜೆಪಿ ಪಕ್ಷ ಅವುಗಳ ಜಾರಿಗೆ ಸಲಹೆ, ಸೂಚನೆಗಳನ್ನು ಕೊಡುತ್ತದೆ. ಸಂಸ್ಕೃತಿ, ವಿಚಾರಗಳಿಗೆ ಅಂಟಿಕೊಂಡ ಪಕ್ಷವಾಗಿದ್ದು, ಜನಪರ ಚಿಂತನೆ ಬಿಜೆಪಿಯಿಂದ ಮಾತ್ರ ಸಾಧ್ಯ ಎಂದು ಡಾ. ಭಾನುಪ್ರಕಾಶ್ ವಿವರಿಸಿದರು.

ಪ್ರತಿಯೊಬ್ಬ ಮಾನವನ ಮಾನ ರಕ್ಷಣೆಯ ಕಾರ್ಯ ನೇಕಾರನಿಂದ ಆಗುತ್ತದೆ. ಇಲ್ಲಿ ನೇಕಾರಿಕೆ ಉದ್ಯೋಗ ಹೆಚ್ಚು ಇದೆ, ನೇಕಾರಿಕೆಗೆ ಬೇಕಾದ ಕಚ್ಚಾ ಮಾಲು ಹತ್ತಿಯನ್ನು ಬೆಳೆಯುವ ರೈತರೂ ಇದ್ದಾರೆ, ಈ ಈರ್ವರಿಗೂ ವಂದನೆಗಳನ್ನು ಸಲ್ಲಿಸಿದ ಭಾನುಪ್ರಕಾಶ್ ಜೊತೆಗೆ ಸಹ ಸಂಯೋಜಕ ಡಾ. ಎ. ಎಚ್. ಶಿವಯೋಗಿಸ್ವಾಮಿ, ಜಯತೀರ್ಥ ಕಟ್ಟಿ, ರಾಜ್ಯ ಸಂಚಾಲಕ ಡಾ.ಬಸವರಾಜ ಕೇಲಗಾರ, ಮಾಜಿ ನಗರಾಧ್ಯಕ್ಷ ಬಸವರಾಜ ಲಕ್ಮೇಶ್ವರ, ನಗರಸಭೆ ಸದಸ್ಯರಾದ ಪ್ರಭಾವತಿ ತಿಳವಳ್ಳಿ, ಮೈಲಪ್ಪ ಗೋಣಿಬಸಮ್ಮನವರ, ತಾಪಂ ಮಾಜಿ ಅಧ್ಯಕ್ಷೆ ಪೂರ್ಣಿಮಾ ಕುರವತ್ತಿ ಪಾಲ್ಗೊಂಡಿದ್ದರು.

## ರಾಮಕೃಷ್ಣ ವಿದ್ಯಾಶಾಲೆ ಪ್ರವೇಶಕ್ಕೆ ಅರ್ಜಿ

ದಾವಣಗೆರೆ ಮಾ.27- ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿ ಹಾಗೂ ಅನೈರ್ಮಲ್ಯಕರ ವೃತ್ತಿಯಲ್ಲಿ ತೊಡಗಿರುವ ಪೋಷಕರ ಪ್ರತಿಭಾವಂತ ಗಂಡು ಮಕ್ಕಳಿಗೆ ಶ್ರೀ ರಾಮಕೃಷ್ಣ ವಿದ್ಯಾಶಾಲೆ ಮೈಸೂರು ಇಲ್ಲಿ 8ನೇ ತರಗತಿ ಪ್ರೇವಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಏಪ್ರಿಲ್ 16 ರಂದು ಬೆಳಿಗ್ಗೆ 10 ಗಂಟೆಗೆ ರಾಮಕೃಷ್ಣ ವಿದ್ಯಾಶಾಲೆ ಯಾದವಗಿರಿ ಮೈಸೂರು ಇಲ್ಲಿ ಆಯ್ಕೆಗಾಗಿ ಪ್ರವೇಶ ಪರೀಕ್ಷೆ ಜರುಗಲಿದ್ದು, ಅರ್ಜಿಯನ್ನು ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ ದಾವಣಗೆರೆ, ಹರಿಹರ, ಹೊನ್ನಾಳಿ, ಜಗಳೂರು, ಚನ್ನಗಿರಿ ಅಥವಾ ದಾವಣಗೆರೆಯ ಉಪನಿರ್ದೇಶಕರ ಕಚೇರಿಯಲ್ಲಿ ಪಡೆಯಬಹುದು.

ಅರ್ಜಿ ಹಾಕಿದ ಪ್ರತಿಯನ್ನು ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಕೊಠಡಿ ಸಂಖ್ಯೆ 37, ಮೊದಲನೇ ಮಹಡಿ, ಜಿಲ್ಲಾಡಳಿತ ಭವನ, ದಾವಣಗೆರೆ ಇಲ್ಲಿ ಅಗತ್ಯ ದಾಖಲೆಗಳೊಂದಿಗೆ ಏಪ್ರಿಲ್ 5 ರೊಳಗೆ ಸಲ್ಲಿಸಬೇಕೆಂದು ತಿಳಿಸಿದೆ.

## ಐ.ಎ.ಎಸ್, ಕೆ.ಎ.ಎಸ್‌ಗೆ ತರಬೇತಿ

ದಾವಣಗೆರೆ ಮಾ.27- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕೇಂದ್ರ ಲೋಕಸೇವಾ ಆಯೋಗ ನಡೆಸುವ ಐ.ಎ.ಎಸ್, ಐ.ಪಿ.ಎಸ್ ಪರೀಕ್ಷೆ ಹಾಗೂ ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಕೆ.ಎ.ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲವಾಗುವ ತರಬೇತಿ ಆಸಕ್ತ ಅಭ್ಯರ್ಥಿಗಳಿಗೆ ನೀಡಲಾಗುತ್ತದೆ.

ಆಸಕ್ತರು ಇದೇ ದಿನಾಂಕ 29 ರೊಳಗಾಗಿ ಹೆಸರನ್ನು ನೋಂದಾಯಿಸಲು ದೂರವಾಣಿ 0821-2515944 ನ್ನು ಸಂಪರ್ಕಿಸಬಹುದಾಗಿದೆ ಎಂದು ಕರಾಮುವಿ ಕುಲಸಚಿವ ಪ್ರೊ.ಆರ್.ರಾಜಣ್ಣ ಅವರು ತಿಳಿಸಿದ್ದಾರೆ.

## ಸಾರ್ವತ್ರಿಕ ಮುಷ್ಕರಕ್ಕೆ ಸಿಐಟಿಯು ಬೆಂಬಲ

ದಾವಣಗೆರೆ : ಎರಡು ದಿನಗಳ ಸಾರ್ವತ್ರಿಕ ಮುಷ್ಕರದ ಭಾಗವಾಗಿ ಸಿಐಟಿಯು ಸಂಯೋಜಿತ ಸಂಘಟನೆಯಾದ ಕರ್ನಾಟಕ ರಾಜ್ಯ ಔಷಧ ಮತ್ತು ಮಾರಾಟ ಪ್ರತಿನಿಧಿಗಳ ಸಂಘದಿಂದ ಇಂದು ಬೆಳಗ್ಗೆ 12 ಗಂಟೆಗೆ ಸಿ.ಜಿ. ಆಸ್ಪತ್ರೆಯ ಮುಂಭಾಗದಲ್ಲಿರುವ ವಿಶ್ವೇಶ್ವರಯ್ಯ ಉದ್ಯಾನವನದ ಹತ್ತಿರ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಿಐಟಿಯು ಜಿಲ್ಲಾ ಸಂಚಾಲಕ ಕೆ.ಹೆಚ್. ಆನಂದರಾಜು ತಿಳಿಸಿದ್ದಾರೆ.

# ವಿಜೃಂಭಣೆಯ ಕುಂದೂರಿನ ಶ್ರೀ ಆಂಜನೇಯ ಸ್ವಾಮಿ ಬ್ರಹ್ಮ ರಥೋತ್ಸವ



ಹೊನ್ನಾಳಿ,ಮಾ.27-ವ್ಯಾಸ ಮಹರ್ಷಿ ಪ್ರತಿಷ್ಠಾಪಿತ ತಾಲ್ಲೂಕಿನ ಕುಂದೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಬ್ರಹ್ಮ ರಥೋತ್ಸವ ಭಾನುವಾರ ಸಹಸ್ರಾರು ಭಕ್ತಾದಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಶ್ರೀ ಆಂಜನೇಯ ಸ್ವಾಮಿಯ ಕೋರೂಟದ ಬಳಿಕ ನಿನ್ನೆ ಮಧ್ಯರಾತ್ರಿಯಿಂದ ಇಂದು ಮುಂಜಾನೆಯವರೆಗೆ ಗಜೋತ್ಸವ ವಿಜೃಂಭಣೆಯಿಂದ ಜರುಗಿತು. ಬಳಿಕ ಮಧ್ಯಾಹ್ನ 12.32ಕ್ಕೆ ಮಿಥುನ ಲಗ್ನದಲ್ಲಿ ವೈಭವದ ರಥೋತ್ಸವ ಡೊಳ್ಳು, ಭಜನೆ, ತಮಟೆ, ಕಹಳೆ, ಜಾಗಟೆ, ಚಕ್ರವಾದ್ಯ, ಸಮಾಳ ಮೇಳಗಳ ಅದ್ಧೂರಿ ಮಂಗಳಕರ ನಿನಾದದ ಮಧ್ಯೆ ಸನಾತನ ಪದ್ಧತಿಯಂತೆ ಶ್ರೀ ಆಂಜನೇಯ ಸ್ವಾಮಿಯ ಬ್ರಹ್ಮರಥಾರೋಹಣ ಹಾಗೂ ಉತ್ಸವಗಳು ವೈಭವದಿಂದ ನಡೆದವು. ಭಕ್ತರು ತೇರಿಗೆ ಬಾಳೆಹಣ್ಣು, ಮೆಣಸಿನಕಾಳು, ಮಂಡಕ್ಕಿ ಮತ್ತಿತರೆ ವಸ್ತುಗಳನ್ನು ಎರಚುತ್ತಿದ್ದ ದೃಶ್ಯ ಕಂಡುಬಂತು. ರಥ ಮುಂದಕ್ಕೆ ಚಲಿಸಿದ ನಂತರ ಭಕ್ತರು ತೇರಿಗೆ ಎರಚಿದ ಮೆಣಸಿನಕಾಳುಗಳನ್ನು ಆಯ್ದುಕೊಳ್ಳುತ್ತಿದ್ದ ದೃಶ್ಯ ಕಂಡುಬಂತು.

ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ರಥೋತ್ಸವದಲ್ಲಿ ಪಾಲ್ಗೊಂಡರು. ಶ್ರೀ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು. ತಹಸೀಲ್ದಾರ್ ಎಚ್.ಜೆ. ರಶ್ಮಿ ಹಾಲೇಶ್, ಉಪ ತಹಸೀಲ್ದಾರ್ ಎಂ.ಕೆ. ಇಂಗಳಗುಂದಿ, ರಾಜಸ್ವ ನಿರೀಕ್ಷಕ ಬಿ. ಎಂ. ರಮೇಶ್, ಕುಂದೂರು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಸಮಿತಿಯ ಅಧ್ಯಕ್ಷ ಸಿ.ಕೆ. ಶೇಖರಪ್ಪ, ದೇವಸ್ಥಾನದ ಆಡಳಿತಾಧಿಕಾರಿ ಎಂ. ಶ್ರೀಕಾಂತ್ ಹಾಗು ಇತರರು ಇದ್ದರು.

**ಇಂದು ಮುಳ್ಳೋತ್ಸವ, ಕಾರಣಿಕ :** ನಾಳೆ ಸೋಮವಾರ ಮಧ್ಯಾಹ್ನ 3ರಿಂದ ಸಂಜೆ 6.30ರವರೆಗೆ ಶ್ರೀ ಆಂಜನೇಯ ಸ್ವಾಮಿಯ ವಿಶಿಷ್ಟವಾದ ಮುಳ್ಳೋತ್ಸವ ಹಾಗೂ ಕಾರಣಿಕ ಮಹೋತ್ಸವ ನಡೆಯಲಿದೆ.

**ನಾಳೆ ಓಕುಳಿ :** ನಾಡಿದ್ದು ದಿನಾಂಕ 29ರ ಮಂಗಳವಾರ ಬೆಳಿಗ್ಗೆ 10.30ಕ್ಕೆ ಓಕುಳಿ ಮಹೋತ್ಸವ, ರಾತ್ರಿ 8ಕ್ಕೆ ಅಡ್ಡಪಲ್ಲಕ್ಕಿ ಉತ್ಸವ ನಡೆಯಲಿದೆ. ದಿನಾಂಕ 29 ಮತ್ತು 30ರಂದು ಬಯಲು ಜಂಗೀ ಕುಸ್ತಿ ಪಂದ್ಯಗಳು ಜರುಗಲಿವೆ.


ಆರೋಗ್ಯ ಸಮಸ್ಯೆಗೆ 100% ಆಯುರ್ವೇದ ಗಿಡಮೂಲಿಕೆಯಿಂದ ಪರಿಹಾರ
ತೂಕ ಇಳಿಕೆ ಮತ್ತು ಹೆಚ್ಚಿಸಿಕೊಳ್ಳುವುದು, ಚರ್ಮದ ಆರೋಗ್ಯ, ಹೃದಯ ಸಂಬಂಧಿ ಸಮಸ್ಯೆ, ಮಕ್ಕಳ ಬೆಳವಣಿಗೆ ಸಮಸ್ಯೆ, ಮೂಳೆ ಮತ್ತು ಕೀಲು ಸಮಸ್ಯೆ, ಗ್ಯಾಸ್ಟ್ರಿಕ್ ಸಮಸ್ಯೆ, ಇತ್ಯಾದಿ.
ವಿನಯ್ ಕುಮಾರ್ 72592 22590

ಮಹಿಳೆ ಬೇಕಾಗಿದ್ದಾರೆ
ವಿದ್ಯಾನಗರ ಆಂಜನೇಯ ದೇವಸ್ಥಾನದ ಎದುರು 13ನೇ ಕ್ರಾಸ್‌ನಲ್ಲಿನ ಮನೆ ಕೆಲಸಕ್ಕೆ ಹೆಣ್ಣು ಮಕ್ಕಳು ಬೇಕಾಗಿದ್ದಾರೆ. ಭೇಟಿ ಸಮಯ : ಬೆಳಿಗ್ಗೆ 8 ರಿಂದ 10ರವರೆಗೆ. ಸಂಪರ್ಕಿಸಿ:
83100 24421

ಮನೆ ಬಾಡಿಗೆಗೆ ಇದೆ
ದೇವರಾಜ ಅರಸು ಬಡಾವಣೆ, ಬಿ ಬ್ಲಾಕ್, 7ನೇ ಕ್ರಾಸ್, ದಾವಣಗೆರೆ ಇಲ್ಲಿ 15x60 ಅಳತೆಯ ಡಬಲ್ ಬೆಡ್ ರೂಂ ಇರುವ ನೆಲಮಹಡಿ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ.
8105143217
9535850456
ಶ್ರೀನಿಧಿ ಕೆ.ಜಿ.

ಬೇಕಾಗಿದ್ದಾರೆ
ಕಾಲೇಜಿನಲ್ಲಿ ಕ್ಲರಿಕಲ್ ವರ್ಕ್ ಮಾಡಲು ಕಂಪ್ಯೂಟರ್ ಅನುಭವವುಳ್ಳ PUC ಆದ ಯುವಕ / ಯುವತಿ ಬೇಕಾಗಿದ್ದಾರೆ.
97424 57556

ಮಳಿಗೆ ಬಾಡಿಗೆಗೆ ಇದೆ
11x18 Sqft ಗ್ರೌಂಡ್ ಫ್ಲೋರ್, 1ನೇ ಕ್ರಾಸ್, ಅಶೋಕ ಮೇನ್ ರೋಡ್, ದಾವಣಗೆರೆ.
83109 84050

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ಹಾಕಲು ಹುಡುಗರು ಬೇಕಾಗಿದ್ದಾರೆ. ತಕ್ಷಣ ಸಂಪರ್ಕಿಸಿ :
73491 56380

SSLC ಪರೀಕ್ಷಾರ್ಥಿಗಳಿಗೆ ಶುಭಾಶಯಗಳು.
ನೇರ ಪರೀಕ್ಷೆಗಳು SSLC, PUC -ARTS/ COM/SCI, Last date 30/03/2022, BA, BCOM, MA, MCOM,
NTC: ನರ್ಸರಿ ಟೀಚರ್ ಟ್ರೈನಿಂಗ್.
ವಿಳಾಸ :ಗಂಗೋತ್ರಿ ಎಜುಕೇಶನಲ್ ಟ್ರಸ್ಟ್(ರಿ). ಲಾಯರ್ ರೋಡ್, ದಾವಣಗೆರೆ.
86602 35013

ನೆಲ ಮಳಿಗೆ ಬಾಡಿಗೆಗೆ ಇದೆ
ಕೆ.ಟಿ.ಜೆ ನಗರದ 8ನೇ ಕ್ರಾಸ್‌ನಲ್ಲಿ 1600 ಚದರಡಿಯುಳ್ಳ ನೆಲ ಮಳಿಗೆಯು ಕಚೇರಿ ಅಥವಾ ಇನ್ನಿತರೆ ವಾಣಿಜ್ಯೋಪಯೋಗಕ್ಕೆ ಬಾಡಿಗೆಗಿದೆ.
ಸಂಪರ್ಕಿಸಿ: 94484-78786
98867-34802

ಇಂಡಿಪೆಂಡೇಂಟ್ ಮನೆಗಳು ಬಾಡಿಗೆಗೆ / ಲೀಸ್‌ಗೆ ಇವೆ. ಸರಸ್ವತಿ ಬಡಾವಣೆ ಮತ್ತು ಜಯನಗರ
99023 83936, 82172 14069
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

ಮನೆ ಮಾರಾಟಕ್ಕಿದೆ
ಸಿದ್ಧವೀರಪ್ಪ ಬಡಾವಣೆ, 10ನೇ ಕ್ರಾಸ್. ನಂ. 1935/7, 44x60 ಅಳತೆಯಲ್ಲಿ 6 ಬೆಡ್ ರೂಂ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ.
99007 00091

REQUIRED
Telecalling for ladies
Location: Davangere.
Contact:
8296376716

ತಕ್ಷಣವೇ ಬೇಕಾಗಿದ್ದಾರೆ
ದಾವಣಗೆರೆಯ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಹಾಗೂ ಫೀಲ್ಡ್ ಆಫೀಸರ್‌ಗಳು & ಎಕ್ಸ್-ಸರ್ವಿಸ್‌ಮೆನ್, ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ತಕ್ಷಣವೇ ಸಂಪರ್ಕಿಸಿ : ಆಕರ್ಷಕ ಸಂಬಳ ಹಾಗೂ ESI & PF ಸೌಲಭ್ಯವಿರುತ್ತದೆ.
86603 98210, 63667 28552
96060 50591

ಸೈಟ್‌ಗಳು ಮಾರಾಟಕ್ಕಿವೆ
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000

Wanted
Boys and Girls required for billing work at Food Mart Supermarket.
Quli: Any Degree
M:98864 63531

ಕರ್ನಾಟಕ ಗೃಹ ಮಂಡಳಿಯಲ್ಲಿ ಮನೆಗಳು, ಸೈಟುಗಳು ಮಾರಾಟಕ್ಕಿವೆ
30x50 East ಮನೆ, 30x40 North, 40x60 East, 40x60 South, 40x60 West, 40x60 North, 30x40 North
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಸ್ಪೋಕನ್ ಇಂಗ್ಲಿಷ್
ಬೇಸಿಗೆ ಶಿಬಿರ
ಶಾಲಾ ಮಕ್ಕಳಿಗಾಗಿ
97399 22225
ವಿಕಾಸ ಕರಿಯರ್ ಎಜುಕೇಷನ್
ರಾಮ್ ಅಂಡ್ ಕೋ ಸರ್ಕಲ್, ಮೆಡ್‌ಪ್ಲಸ್ ಪಕ್ಕ.

ಬೇಕಾಗಿದ್ದಾರೆ
ಶಾಲೆಯಲ್ಲಿ ಆಯಾ ಕೆಲಸಕ್ಕೆ ಹಾಗೂ ವಾಚ್‌ಮೆನ್ ಕೆಲಸಕ್ಕೆ ಬೇಕಾಗಿದ್ದಾರೆ. ವಿಚಾರಿಸಿ.
94488 39229, 94492 66133

ಬೆಂಗಳೂರಿನಲ್ಲಿ ಸೆಕ್ಯೂರಿಟಿ ಬೇಕಾಗಿದ್ದಾರೆ
ಸಂಬಳ 9000, ಊಟ, ರೂಂ ಉಚಿತ
ಸಂಪರ್ಕಿಸಿ :
97400 98064, 97400 98047

ರಾಜಲಕ್ಷ್ಮಿ ಫಾರ್ಮಾದಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ
Stock ತೆಗೆಯುವುದಕ್ಕೆ ಮತ್ತು ಡೆಲಿವರಿ ಕೊಡಲು ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC, PUC, Pass or Fail
ವಿಳಾಸ : PJ Extn., 7th Main, 7th Cross, Chethana Hotel Road, Davanagere
73534 37555

ಶ್ರೀ ಘುತ್ತರಕಿ ಭಾಗ್ಯಮ್ಮದೇವಿ ಜ್ಯೋತಿಷ್ಯಾಲಯ
ಶ್ರೀ ದತ್ತಾತ್ರೇಯ ಉಪಾಸಕರು ಪಂಡಿತ್ ಶ್ರೀ ಭರತ್ ಗುರೂಜಿ
ಮನೆಯಲ್ಲಿ ಅಶಾಂತಿ, ಅನಾರೋಗ್ಯ, ವಿದ್ಯೆ, ಉದ್ಯೋಗ, ವ್ಯಾಪಾರ, ಶತ್ರು ಕಾಟ, ಮಾಟ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲಕ್ಷ್ಮೀ ವಶ, ಭೂಮಿ ವಶ, ವಿದೇಶ ಪ್ರಯಾಣ, ಸಾಲದ ಬಾಧೆ ಇನ್ನೂ ನಿಮ್ಮ ಹಲವು ಸಮಸ್ಯೆಗಳಿಗೆ ಶೀಘ್ರ ಪರಿಹಾರ. ಫೋನಿನ ಮೂಲಕ ಸ್ವರ ಭವಿಷ್ಯದ ನಿಮ್ಮ ಸಮಸ್ಯೆಗಳಿಗೆ ಪರಿಹಾರ ತಿಳಿಸುತ್ತಾರೆ. ಇಂದೇ ಕರೆ ಮಾಡಿ
9980770791

ಉಚಿತ ಥೆರಪಿ
ಬಿಪಿ, ಶುಗರ್, ಥೈರಾಯ್ಡ್ ವೆರಿಕೋಸ್ ವೇನ್, ನಿದ್ರಾಹೀನತೆ, ಮಲಬದ್ಧತೆ, ನರಗಳ ಸೆಳೆತ, ಸೊಂಟ/ಮಂಡಿ ನೋವು,ಗ್ಯಾಸ್ಟ್ರಿಕ್, ಇತರೆ ಯಾವುದೇ ಸಮಸ್ಯೆಗಳಿಗೆ ನೇರ ಪರಿಹಾರ. HOME DEMO ಸೌಲಭ್ಯ ವಿದೆ.T&C ಲಾಯರ್ ರೋಡ್, ದಾವಣಗೆರೆ.
86602 35013.

SUMMER TUITIONS
FOR SSLC/ PCMB / COMM /ARTS/
100 % Results With solved notes.
SINCHANA ACADEMY
Near RAM & Co Circle, Davangere
90195 80600
85532 78258

ಸೈಟ್ ಮಾರಾಟಕ್ಕಿದೆ
ಬಾಡಾ ಕ್ರಾಸ್ ಬಳಿ ಸೈಟ್ ಮಾರಾಟಕ್ಕಿದೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ.)
ವಿಚಾರಿಸಿ.
98445 59595, 99646 59555

ಮಳಿಗೆ ಬಾಡಿಗೆಗೆ ಇದೆ
ಮಾಮಾಸ್ ಜಾಯಿಂಟ್ ರೋಡ್,
ರೂಮ್ ಬಾಡಿಗೆಗೆ ಇದೆ
ಚಾಮರಾಜ ಪೇಟೆ
82177 72482

## ಪರೀಕ್ಷಾ ಶುಲ್ಕ ಪಾವತಿಗೆ ನಾಡಿದ್ದು ಕೊನೆಯ ದಿನ

ದಾವಣಗೆರೆ ಮಾ.27- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕ ಪದವಿ ಹಾಗೂ ಸ್ನಾತಕೋತ್ತರ ಪದವಿಯ ವಿವಿಧ ಸಾಲಿನ ಪುನರಾವರ್ತಿತ ವಿದ್ಯಾರ್ಥಿಗಳು ಹಾಗೂ 2020-21 ನೇ ಸಾಲಿನ ಸ್ನಾತಕೋತ್ತರ ಪದವಿ ಮುಂತಾದ ವಿದ್ಯಾರ್ಥಿಗಳಿಗೆ ವಾರ್ಷಿಕ ಅಥವಾ ಸೆಮಿಸ್ಟರ್ ಪರೀಕ್ಷೆಗಳಿಗೆ ದಂಡ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕ ಪಾವತಿಸುವ ಅವಧಿಯನ್ನು ಇದೇ ದಿನಾಂಕ 30 ರವರೆಗೆ ಮಾತ್ರ ಪುನರ್ ನಿಗದಿಪಡಿಸಲಾಗಿದೆ.

2001-02 ರಿಂದ 2014-15 ಹಾಗೂ 2018-19, 2019-20 ರ ಸ್ನಾತಕ ಪದವಿ ಮತ್ತು ಎಲ್.ಎಲ್.ಎಂ, ಎಂ.ಬಿ.ಎ (ಲಾ), ಎಂ.ಟಿ.ಎಂ ಪದವಿಯ ಪುನರಾವರ್ತಿತ ವಿದ್ಯಾರ್ಥಿಗಳು ಹಾಗೂ 2020-21ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪಡೆದ ಸ್ನಾತಕ, ಸ್ನಾತಕೋತ್ತರ ಪದವಿಗಳಾದ ಬಿ.ಎ, ಬಿ.ಕಾಂ, ಬಿ.ಲಿಬ್.ಐ.ಎಸ್ಸಿ, ಎಂ.ಎ. ಎಂ.ಕಾಂ, ಎಂ.ಬಿ.ಎ, ಎಂ.ಲಿಬ್.ಐ.ಎಸ್ಸಿ, ಎಲ್ಲಾ ಎಂ,ಎಸ್ಸಿ ಮತ್ತು ಎಲ್ಲಾ ಸ್ನಾತಕ ಸ್ನಾತಕೋತ್ತರ ಡಿಪ್ಲೋಮಾ ಸರ್ಟಿಫಿಕೇಟ್ ಕಾರ್ಯಕ್ರಮಗಳ ವಿದ್ಯಾರ್ಥಿಗಳಿಗೆ ವಾರ್ಷಿಕ ಅಥವಾ ಸೆಮಿಸ್ಟರ್ ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕವನ್ನು ಅಂತರ್ಜಾಲದ ಮೂಲಕ ರೂ. 200/- ದಂಡ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕವನ್ನು ಪಾವತಿಸಲು ಏಪ್ರಿಲ್ 8 ರವರೆಗೆ ದಿನಾಂಕ ನಿಗದಿಗೊಳಿಸಲಾಗಿತ್ತು.

ವಿಶ್ವವಿದ್ಯಾನಿಲಯದ ಪರೀಕ್ಷೆಗಳನ್ನು ಏಪ್ರಿಲ್ ಮೊದಲನೇ ವಾರದಲ್ಲಿ ಪ್ರಾರಂಭಿಸಲಾಗುತ್ತಿದ್ದು, ವಿವರಕ್ಕೆ ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್ www.ksoumysuru.ac.in ವೀಕ್ಷಿಸುವುದು ಹಾಗೂ ಆನ್‌ಲೈನ್ ಸಹಾಯವಾಣಿ ಸಂಖ್ಯೆ: 8800335638 ಸಂಪರ್ಕಿಸಬಹುದಾಗಿದೆ ಎಂದು ಕುಲಚಿವರು (ಪರೀಕ್ಷಾಂಗ) ಅವರು ತಿಳಿಸಿದ್ದಾರೆ.

## ಇಂದಿರಾ ಗಾಂಧಿ ಮುಕ್ತ ವಿವಿ : ನೋಂದಣಿಗೆ ನಾಡಿದ್ದು ಕೊನೆಯ ದಿನ

ದಾವಣಗೆರೆ,ಮಾ.27- ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದಲ್ಲಿ ನೋಂದಣಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಇದೇ ದಿನಾಂಕ 31 ಹೆಸರು ನೋಂದಣಿಗೆ ಕೊನೆಯ ದಿನವಾಗಿರುತ್ತದೆ. ನೋಂದಣಿ ಸಂಪೂರ್ಣ ಆನ್‌ಲೈನ್ ಪ್ರಕ್ರಿಯೆಯಾಗಿದೆ. ಹೆಚ್ಚಿನ ಮಾಹಿತಿಗಾಗಿ ಪ್ರೊ. ವೈ. ವೃಷಭೇಂದ್ರಪ್ಪ (08192-223575), ಡಾ.ಷಣ್ಮುಗಂ (9482836074), ಡಾ.ಅಶೋಕ (9844606353) ಅವರನ್ನು ಸಂಪರ್ಕಿಸಬಹುದು.





## ರಕ್ತ ನಿಧಿ ಕೇಂದ್ರ, ವಿಭಜಕ ಘಟಕಗಳ ಉದ್ಘಾಟನೆ

ದಾವಣಗೆರೆ, ಮಾ. 27 – ನಗರದ ಶಾಮನೂರು ಶಿವಶಂಕರಪ್ಪ ರೆಡ್ ಕ್ರಾಸ್ ಭವನದ ಆವರಣದಲ್ಲಿ ರೆಡ್ ಕ್ರಾಸ್‌ರಕ್ತನಿಧಿಕೇಂದ್ರವನ್ನುಭಾನುವಾರಉದ್ಘಾಟಿಸಲಾಯಿತು.

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ರಕ್ತನಿಧಿ ಕೇಂದ್ರ ಉದ್ಘಾಟಿಸಿದರು. ಸಂಸದ ಜಿ.ಎಂ. ಸಿದ್ದೇಶ್ವರ ಅವರು ರಕ್ತ ವಿಭಜಕ ಘಟಕದ ಉದ್ಘಾಟನೆ ನೆರವೇರಿಸಿದರು. ಶಾಸಕ ಎಸ್.ಎ. ರವೀಂದ್ರನಾಥ್ ಆ್ಯಂಬುಲೆನ್ಸ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ರೆಡ್ ಕ್ರಾಸ್ ಸಭಾಪತಿ ಡಾ. ಎ.ಎಂ. ಶಿವಕುಮಾರ್, ವೈಸ್ ಛೇರ್ಮನ್ ಗೌಡ್ರು ಚನ್ನಬಸಪ್ಪ, ಡಿ. ಎಸ್. ಸಿದ್ದಣ್ಣ, ಪ್ರಧಾನ ಕಾರ್ಯದರ್ಶಿ ಉಮೇಶ್ ಶೆಟ್ಟಿ, ಕಾರ್ಯದರ್ಶಿ ಡಿ.ಎಸ್. ಸಾಗರ, ಖಜಾಂಚಿ ಅನಿಲ್ ಬಾರೆಂಗಳ್, ನಿರ್ದೇಶಕರಾದ ಡಾ. ಮಹೇಶ್ ಕರಿಯಪ್ಪ, ಹೆಚ್.ಮಂಜುನಾಥ, ಡಾ. ಎ.ಎಂ. ಶಿಲ್ಪಶ್ರೀ, ಮಹಮ್ಮದ್ ಇನಾಯತ್‌ವುಲ್ಲಾ, ಎನ್.ವಿ. ವಸಂತರಾಜು, ಡಿ.ಎನ್. ಶಿವಾನಂದ, ಎ.ಜೆ. ರವಿಕುಮಾರ್, ಕೆ.ಕೆ. ನಾಗರಾಜ್, ಶ್ರೀಕಾಂತ್ ಬಗರೆ, ಎಂ.ಎಸ್. ನರೇಂದ್ರ ಪ್ರಕಾಶ, ಪೃಥ್ವಿರಾಜ್ ಬಾದಾಮಿ, ಎಂ.ಕುಮಾರ್, ಡಾ. ಬಿ.ವಿ.ಧನಂಜಯಮೂರ್ತಿ, ಟಿ. ಕರಿಬಸವಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಸಮಾಜಕ್ಕೆ ಉತ್ತಮ ಸಂದೇಶ ನೀಡಲು ರಂಗಭೂಮಿಯಿಂದ ಮಾತ್ರ ಸಾಧ್ಯ

### ವಿಶ್ವ ರಂಗಭೂಮಿ ದಿನಾಚರಣೆ ಕಾರ್ಯಕ್ರಮದಲ್ಲಿ ಜಾನಪದ ತಜ್ಞ ಡಾ. ಎಂ.ಜಿ. ಈಶ್ವರಪ್ಪ ಪ್ರತಿಪಾದನೆ

ದಾವಣಗೆರೆ, ಮಾ. 27- ನಾಟಕ ಅಂತರಂಗ ಮತ್ತು ಬಹಿರಂಗದ ಕನ್ನಡಿ. ರಂಗ ಭೂಮಿಯಿಂದ ಮಾತ್ರ ಸಮಾಜಕ್ಕೆ ಉತ್ತಮ ಸಂದೇಶಗಳನ್ನು ನೀಡಲು ಸಾಧ್ಯ ಎಂದು ಜಾನ ಪದ ತಜ್ಞ ಡಾ. ಎಂ.ಜಿ. ಈಶ್ವರಪ್ಪ ಹೇಳಿದರು.

ನಗರದ ಪದ್ಮಶ್ರೀ ಚಿಂದೋಡಿ ಲೀಲಾ ಕಲಾ ಕ್ಷೇತ್ರದಲ್ಲಿ ಕರ್ನಾಟಕ ನಾಟಕ ಅಕಾಡೆಮಿ, ಪ್ರತಿಮಾ ಸಭಾ, ವೃತ್ತಿ ರಂಗಭೂಮಿ ರಂಗಾಯಣ, ಎಲ್ಲಾ ತಂಡಗಳ ರಂಗಾಸಕ್ತರು ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ವಿಶ್ವ ರಂಗಭೂಮಿ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಾಧ್ಯಮಗಳ ಪ್ರಭಾವದಿಂದಾಗಿ ರಂಗಭೂಮಿ ಸೊರಗಿ ಹೋಗಿದೆ. ಹಿಂದೆ ನಾಟಕಗಳಿಗೆ ಭಾರೀ ಬೇಡಿಕೆ ಇತ್ತು. ನಾಟಕ ತಂಡಗಳನ್ನು ಹುಡುಕಿಕೊಂಡು ಹೋಗುವ ಸಂದರ್ಭಗಳಿದ್ದವು. ಆದರೆ ಈಗ ನಾಟಕ ತಂಡಗಳೇ ಜನರನ್ನು ಹುಡುಕಿಕೊಂಡು ಹೋಗುವ ಪರಿಸ್ಥಿತಿ ಬಂದಿದೆ ಎಂದರು.

ಸುಖೀ ಸಮಾಜ ನಿರ್ಮಾಣದ ಹಿನ್ನೆಲೆಯಲ್ಲಿ ರಂಗಭೂಮಿ ಇನ್ನೂ ಹಸನಾಗಬೇಕಿದೆ. ರಂಗಭೂಮಿಯನ್ನು ಜೀವಂತವಾಗಿಡುವ ಬಗ್ಗೆ ಚಿಂತನೆಗಳು ನಡೆಯಬೇಕಿವೆ. ಕಾವ್ಯ ಪ್ರಾಕಾರಗಳಲ್ಲಿ ಅತ್ಯಂತ ಶ್ರೇಷ್ಠವಾದ ದೃಶ್ಯ ಕಾವ್ಯ ನಾಟಕ ಎಂದು ಹೇಳಿದರು.



ದಾವಣಗೆರೆ ವೃತ್ತಿರಂಗಭೂಮಿಯ ಪುಣ್ಯಕ್ಷೇತ್ರ. ಈ ನೆಲದಲ್ಲಿ ಪ್ರದರ್ಶನಗೊಂಡ ಎಲ್ಲಾ ನಾಟಕಗಳು ಯಶಸ್ವಿಯಾಗಿವೆ. ನಾಟಕ ಕಂಪನಿ ಮಾಲೀಕರ ಜೇಬು ಸಹ ತುಂಬುತ್ತಿತ್ತು. ಐದು ನಾಟಕ ಕಂಪನಿಗಳು ಏಕ ಕಾಲಕ್ಕೆ ನಾಟಕ ಪ್ರದರ್ಶನ ಮಾಡಿದ ಉದಾಹರಣೆ ಗಳು ಸಹ ಇವೆ ಎಂದು ತಿಳಿಸಿದರು.

ಹಾರ್ಮೋನಿಯಂ ನುಡಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ನಟ, ನಿರ್ದೇಶಕ ಯಶವಂತ್ ಸರ್‌ದೇಶಪಾಂಡೆ ಮಾತನಾಡಿ, ರಂಗ ಚಟುವಟಿಕೆಗಳನ್ನು ನಿರಂತರವಾಗಿ ನಡೆಸುವುದರಿಂದ ಮಾತ್ರ ರಂಗಭೂಮಿಯನ್ನು ಜೀವಂತವಾಗಿಡಲು ಸಾಧ್ಯ ಎಂದರು. ಉತ್ತಮ ನಾಟಕಗಳನ್ನು ಪ್ರಸ್ತುತಿಪಡಿಸುವ ಮೂಲಕ ರಂಗಭೂಮಿಯತ್ತ ಜನರನ್ನು ಆಕರ್ಷಿಸಬೇಕಾಗಿದೆ. ಕೇವಲ ಒಂದು ದಿನಕ್ಕೆ ವಿಶ್ವ ರಂಗಭೂಮಿ ದಿನಾಚರಣೆ ಸೀಮಿತಗೊಳ್ಳದೇ ವರ್ಷವಿಡೀ ರಂಗ ಚಟುವಟಿಕೆಗಳನ್ನು ನಡೆಸುವತ್ತ ಚಿತ್ತ ಹರಿಸಬೇಕಾಗಿದೆ ಎಂದು ಹಿತ ನುಡಿದರು.

ಭೂಮಿಕಾ ವನಿತಾ ರಂಗ ವೇದಿಕೆ ಅಧ್ಯಕ್ಷೆ ಡಾ. ಅನುರಾಧ ಬಕ್ಕಪ್ಪ ಅವರು ವಿಶ್ವ ರಂಗಭೂಮಿ ಸಂದೇಶ ವಾಚನ ಮಾಡಿದರು. ಹಿರಿಯ ಪತ್ರಕರ್ತರೂ, ರಂಗಕರ್ಮಿಯೂ ಆಗಿರುವ ಬಾ.ಮ. ಬಸವರಾಜಯ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ರವೀಂದ್ರ ಹೆಚ್. ಅರಳಗುಪ್ಪಿ, ನಾವು ನೀವು ತಂಡದ ಎಸ್.ಎಸ್. ಸಿದ್ಧರಾಜ್ ಮತ್ತಿತರರು ಉಪಸ್ಥಿತರಿದ್ದರು.

## ಮಳಲ್ಕೆರೆ : ಡಾ.ರಾಜಶೇಖರಪ್ಪ ಅವರಿಗೆ ಸನ್ಮಾನ



ದಾವಣಗೆರೆ, ಮಾ.28- ತಾಲ್ಲೂಕಿನ ಮಳಲ್ಕೆರೆ ಗ್ರಾಮದ ಶ್ರೀ ಮಲ್ಲೇಶ್ವರ ನೀರು ಬಳಕೆದಾರರ ಸಹಕಾರ ಸಂಘದ ಹಿರಿಯ ಸದಸ್ಯರೂ ಆಗಿರುವ ಜಜಮು ವೈದ್ಯಕೀಯ ಮಹಾವಿದ್ಯಾಲಯದ ನಿವೃತ್ತ ಪ್ರಾಂಶುಪಾಲ ಡಾ|| ಎಂ.ಜಿ. ರಾಜಶೇಖರಪ್ಪ ಅವರು ಸಂಘದ ಅಭಿವೃದ್ದಿಗೆ ಸಹಕಾರ, ಪ್ರೋತ್ಸಾಹ, ಮಾರ್ಗದರ್ಶನ ನೀಡುತ್ತಿದ್ದು, ಅವರನ್ನು ಅಮೂಲ್ಯ ರತ್ನ ಎಂದು ಗುರುತಿಸಿ ಸಂಘದ ಆಡಳಿತ ಮಂಡಳಿಯಿಂದ ಕಳೆದ ವಾರ ಸನ್ಮಾನಿಸಲಾಯಿತು ಎಂದು ಸಂಘದ ಅಧ್ಯಕ್ಷ ಜಿ. ಮುರಿಗೇಂದ್ರಪ್ಪ ಮಳಲಕೆರೆ ತಿಳಿಸಿದ್ದಾರೆ.

ಸಂಘದ ಅಧ್ಯಕ್ಷ ಜಿ. ಮುರಿಗೇಂದ್ರಪ್ಪ, ಉಪಾಧ್ಯಕ್ಷ ಎಂ.ಎಸ್. ನಾಗರಾಜ್, ಮುಖ್ಯಕಾರ್ಯನಿ ರ್ವಾಹಕ ಜಿ. ತಿಪ್ಪೇಸ್ವಾಮಿ, ನಿರ್ದೇಶಕರುಗಳಾದ ಎಸ್.ಎಸ್. ಸುರೇಶ್, ವೈ.ಜಿ. ಚಂದ್ರಶೇಖರಪ್ಪ, ಪಿ.ಡಿ. ಸೋಮಣ್ಣ, ನಾಗನಗೌಡ, ಜಿ.ಎಂ. ಗಿರೀಶ್, ಕೆ.ಸಿ. ಚಮನ್ ಸಾಬ್, ಶ್ರೀಮತಿ ಪಾರ್ವತಮ್ಮ, ಶ್ರೀಮತಿ ಜಿ. ಗಿರಿಜಮ್ಮ, ಬಿ. ಶ್ರೀನಿವಾಸ್ ಹಾಗು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಕುಂದೂರಿನಲ್ಲಿಂದು ಶ್ರೀ ಆಂಜನೇಯ ಸ್ವಾಮಿ ಬ್ರಹ್ಮರಥೋತ್ಸವ



ಹೊನ್ನಾಳಿ ತಾಲ್ಲೂಕಿನ ಕುಂದೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಬ್ರಹ್ಮ ರಥೋತ್ಸವ ಇಂದು ಮುಂಜಾನೆ ಮಹಾ ರಥೋತ್ಸವ, ಮಧ್ಯಾಹ್ನ 3.30ರಿಂದ ಸಂಜೆ 6.30ರವರೆಗೆ ಮುಳ್ಳೋತ್ಸವ, ಕಾರಣಿಕ ಮಹೋತ್ಸವ, ದಿನಾಂಕ 29ರ ಮಂಗಳವಾರ ಬೆಳಗ್ಗೆ 10.30 ಮತ್ತು ರಾತ್ರಿ 8ಕ್ಕೆ ಓಕುಳಿ, ಅಡ್ಡಪಲ್ಲಕ್ಕಿ ಉತ್ಸವ ನೆರವೇರುತ್ತವೆ ಎಂದು ತಹಸೀಲ್ದಾರ್ ಎಚ್.ಜೆ. ರಶ್ಮಿ ಹಾಲೇಶ್ ತಿಳಿಸಿದರು.

ದಿನಾಂಕ 29 ಮತ್ತು 30 ರಂದು ಬಯಲು ಜಂಗೀ ಕುಸ್ತಿಗಳು ನಡೆಯುವವು.

## ರೇಣುಕಾಚಾರ್ಯರ ಜಯಂತಿ : ಜಂಗಮ ಸಹಕಾರಿ ಸಂತಸ

ದಾವಣಗೆರೆ,ಮಾ.27- ಶ್ರೀ ರೇಣುಕಾಚಾರ್ಯರ ಜಯಂತಿಯನ್ನು ರಾಜ್ಯ ಸರ್ಕಾರದಿಂದಲೇ ಪ್ರತಿ ವರ್ಷ ಆಚರಿಸುವುದಾಗಿ ಘೋಷಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ನಗರದ ಜಂಗಮ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ಪರವಾಗಿ ಅಧ್ಯಕ್ಷ ಎಂ.ಎನ್. ಬಸವರಾಜಯ್ಯ ಅಭಿನಂದಿಸಿದ್ದಾರೆ.

### ಗುಡಾಳ್‌ನಲ್ಲಿ ಇಂದು ಶ್ರೀ ಆಂಜನೇಯ ತೇರು

ದಾವಣಗೆರೆ ತಾಲ್ಲೂಕಿನ ಗುಡಾಳು ಗ್ರಾಮದ ಶ್ರೀ ಆಂಜನೇಯ ಸ್ವಾಮಿಯ ದೊಡ್ಡ ರಥೋತ್ಸವವು ಇಂದು ಬೆಳಿಗ್ಗೆ 7.30 ಕ್ಕೆ ನಡೆಯಲಿದೆ. ನಾಳೆ ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಓಕಳಿ ನಡೆಯುವುದು.

## ಎಸ್ಸೆಸ್ಸೆಲ್ಸಿ ಪರೀಕ್ಷೆ : ವಿದ್ಯಾರ್ಥಿಗಳಿಗೆ ಉಚಿತ ಬಸ್ ಪ್ರಯಾಣ

### ವಿನಾಯಕ ನಗರ ಸಾರಿಗೆಯ ಸೇವೆ

ದಾವಣಗೆರೆ, ಮಾ.27- ನಾಳೆ ದಿನಾಂಕ 28ರ ಸೋಮವಾರದಿಂದ ಏಪ್ರಿಲ್ 11ರವರೆಗೆ ನಡೆಯಲಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ವಿನಾಯಕ ನಗರ ಸಾರಿಗೆಯಿಂದ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ.

ಪರೀಕ್ಷೆಗೆ ಹಾಜರಾಗುವ ಎಲ್ಲಾ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ತಮ್ಮ ವಾಸ ಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರವರೆಗೆ ಹೋಗುವಾಗ ಮತ್ತು ಬರುವಾಗ ಪರೀಕ್ಷಾ ಪ್ರವೇಶ ಪತ್ರ ತೋರಿಸಿ, ವಿನಾಯಕ ನಗರ ಸಾರಿಗೆ ಉಚಿತವಾಗಿ ಪ್ರಯಾಣಿಸಬಹುದು ಎಂದು ವಿನಾಯಕ ಬಸ್ ಮಾಲೀಕ ಎಂ.ಎನ್.ಹರೀಶ್ ತಿಳಿಸಿದ್ದಾರೆ. ವಿದ್ಯಾರ್ಥಿಗಳು ತಮ್ಮ ಬಸ್ಸಿನ ಉಚಿತ ಸೇವೆಯನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಕರೆ ನೀಡಿರುವ ಹರೀಶ್, ವಿದ್ಯಾರ್ಥಿಗಳು ಪರೀಕ್ಷೆಯನ್ನು ಆತ್ಮವಿಶ್ವಾಸದಿಂದ ಎದುರಿಸುವುದರ ಮೂಲಕ ಜಿಲ್ಲೆಗೆ ಉತ್ತಮ ಫಲಿತಾಂಶವನ್ನು ತಂದುಕೊಡುವಂತೆ ಮನವಿ ಮಾಡಿದ್ದಾರೆ.

## ಶೈಕ್ಷಣಿಕ ಬೆಳವಣಿಗೆಗೆ ಶ್ರಮಿಸಿದ ತೃಪ್ತಿ ಇದೆ



### ಬೀಳ್ಕೊಡುಗೆ ಸಮಾರಂಭದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದ ನಿಕಟಪೂರ್ವ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ

ದಾವಣಗೆರೆ, ಮಾ.27- ವೃತ್ತಿ, ಪ್ರವೃತ್ತಿಯಿಂದ ಸಂಪೂರ್ಣವಾಗಿ ಶೈಕ್ಷಣಿಕ ಅಭಿವೃದ್ಧಿಗೆ ತೊಡಗಿಸಿಕೊಂಡು, ದಾವಣಗೆರೆ ವಿಶ್ವವಿದ್ಯಾನಿಲಯದ ಬೆಳವಣಿಗೆಗೆ ಶ್ರಮಿಸಿದ ತೃಪ್ತಿ ಇದೆ. ಇಲ್ಲಿ ಕೆಲಸ ಮಾಡಿದ್ದು ಅದ್ಭುತ ಅನುಭವ ನೀಡಿದೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ನಿಕಟಪೂರ್ವ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಹೇಳಿದರು.

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಭಾನುವಾರ ಏರ್ಪಡಿಸಿದ್ದ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕುಲಸಚಿವನಾಗಿ ಮತ್ತು ಕುಲಪತಿಯಾಗಿ ಈ ಭಾಗದ ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಆದ್ಯತೆ ನೀಡಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಬಡತನದಿಂದ ಬೆಳೆದು, ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿ, ವಿಶ್ವವಿದ್ಯಾನಿಲಯದ ಕುಲಪತಿ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ್ದು ದೈವೀ ಕೃಪೆ. ಅದನ್ನು ಪ್ರಾಮಾಣಿಕವಾಗಿ ನಿರ್ವಹಿಸಿದ ಸಮಾಧಾನವಿದೆ ಎಂದು ತಿಳಿಸಿದರು.

ಬೋಧಕ ಸಿಬ್ಬಂದಿಯ ನೇಮಕದ ಮೂಲಕ ವಿಶ್ವವಿದ್ಯಾನಿಲಯವನ್ನು ರಾಷ್ಟ್ರಮಟ್ಟದಲ್ಲಿ ಗುರುತಿಸುವಂತೆ ಮಾಡಲಾಗಿದೆ. ಸಂಶೋಧನೆ, ಬೋಧನೆ ಮತ್ತು ಶೈಕ್ಷಣಿಕೇತರ ಕಾರ್ಯಚಟುವಟಿಕೆಗಳ ಜೊತೆಗೆ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಶಿಕ್ಷಣ ನೀಡಲಾಗಿದೆ ಎಂದರು.

ವಿಶ್ವವಿದ್ಯಾನಿಲಯದ ಹಂಗಾಮಿ ಕುಲಪತಿ ಪ್ರೊ. ಪಿ.ಲಕ್ಷ್ಮಣ್, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಆದ್ಯತೆ ನೀಡುವುದು ಪ್ರತಿಯೊಬ್ಬ ಪ್ರಾಧ್ಯಾಪಕನ ಕೆಲಸ. ಬಯಸದೇ ಸಿಕ್ಕಿರುವ ಹಂಗಾಮಿ ಕೆಲಸವನ್ನು ಪ್ರಾಮಾಣಿಕವಾಗಿ ನಿರ್ವಹಿಸಲು ಎಲ್ಲರ ಸಹಕಾರ ಅಗತ್ಯ ಎಂದು ನುಡಿದರು.

ಕುಲಸಚಿವೆ ಪ್ರೊ.ಗಾಯತ್ರಿ, ವಿವಿಧ ನಿಕಾಯಗಳ ಡೀನ್‌ಗಳಾದ ಪ್ರೊ.ರಾಮಲಿಂಗಪ್ಪ, ಪ್ರೊ.ಪಲಾಟಿ, ಡಾ. ವೆಂಕಟೇಶ್ ಮಾತನಾಡಿದರು. ಇದೇ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯ ಮತ್ತು ವಿವಿಧ ವಿಭಾಗಗಳ ವತಿಯಿಂದ ಪ್ರೊ. ಹಲಸೆ ಅವರನ್ನು ಸನ್ಮಾನಿಸಲಾಯಿತು. ಪ್ರೊ. ಅಭಿನಂದನಾ ಗ್ರಂಥ 'ಶರಣ ಸ್ಫೂರ್ತಿ'ಯನ್ನು ಪ್ರೊ. ಲಕ್ಷ್ಮಣ್ ಬಿಡುಗಡೆ ಮಾಡಿದರು. ಡಾ. ಎಚ್.ವಿಶ್ವನಾಥ್ ಕಾರ್ಯಕ್ರಮ ನಿರೂಪಿಸಿದರು.

## ಕುಸ್ತಿಯಲ್ಲಿ ಮಹಾರಾಷ್ಟ್ರದ ದತ್ತ ನೆರಳೆಗೆ ಪ್ರಶಸ್ತಿ



ಹರಿಹರ

ಹರಿಹರ, ಮಾ. 27- ಶ್ರೀ ಗ್ರಾಮದೇವತೆ ಊರಮ್ಮ ದೇವಿಯ ಹಬ್ಬದ ಅಂಗವಾಗಿ ನಗರದ ಡಿ.ಆರ್.ಎಂ. ಶಾಲಾ ಮೈದಾನದಲ್ಲಿ ಇಂದು ನಡೆದ ಜಿದ್ದಾ ಜಿದ್ದಿನ ಕುಸ್ತಿ ಪಂದ್ಯದಲ್ಲಿ ಮಹಾರಾಷ್ಟ್ರದ ಕೊಲ್ಲಾಪುರದ ದತ್ತ ನೆರಳೆ ಪೈಲ್ವಾನ್ ಅವರು ತಮ್ಮ ಎದುರಾಳಿಯಾದ ಹರಿಯಾಣ ಸೇನಾ ದಳದ ಕರ್ಣ ಅವರನ್ನು ಸೋಲಿಸುವುದರ ಮೂಲಕ ಬೆಳ್ಳಿ ಗದೆ ಮತ್ತು 1 ಲಕ್ಷದ 20 ಸಾವಿರ ನಗದು ಬಹುಮಾನ ಪಡೆದುಕೊಂಡರು.

ನಗದು ಮತ್ತು ಬೆಳ್ಳಿ ಗದೆಯ ಬಹುಮಾನವನ್ನು ಕಾಗಿನಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದ ಪುರಿ ಮಹಾಸ್ವಾಮೀಜಿ ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ಹಿರಿಯ ಕುಸ್ತಿ ಪಟು ಕೆ. ಜಡಿಯಪ್ಪ, ನಂದಿಗಾವಿ ಶ್ರೀನಿವಾಸ್, ಸುರೇಶ್ ಚಂದಾಪೂರ್, ಜಗದೀಶ್ ಚೂರಿ, ರೇವಣಪ್ಪ, ಕೆ. ಅಣ್ಣಪ್ಪ, ಸ್ವಾರ್ ಈರಣ್ಣ , ಬಿ. ವೀರಣ್ಣ ದಾವಣಗೆರೆ, ಬ್ಯಾಂಕ್ ನಾಗರಾಜ್, ಪಾಲಾಕ್ಷಪ್ಪ, ಅಣ್ಣಪ್ಪ ಶಾವಿ, ಶೇರಾಪುರ ರಾಜಪ್ಪ, ಬೆಣ್ಣೆ ರೇವಣಸಿದ್ದಪ್ಪ, ಕಂಚಿಕೇರಿ ಚಿದಾನಂದ, ಗೌಡ್ರು ಪುಟ್ಟಪ್ಪ, ಲಿಂಗಾರಾಜ್ ಪಾಟೀಲ್, ಆಸೀಫ್ ಆಲಿ, ಬೀರೇಶ್, ನಾಗರಾಜ್, ಕಾಳಿಂಗ, ವಿಜಯ, ಇತರರು ಹಾಜರಿದ್ದರು.

ಈ ಪಂದ್ಯದ ತೀರ್ಪುಗಾರರಾಗಿ ಹಿರಿಯ ಕುಸ್ತಿ ಪಟು ಕೆ. ಜಡಿಯಪ್ಪ ಮತ್ತು ಪೈಲ್ವಾನ್ ಸುರೇಶ್ ಚಂದಾಪೂರ್ ಕಾರ್ಯ ನಿರ್ವಹಿಸಿದರು.

## ಇಂದಿನಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ : ನಿಷೇಧಾಜ್ಞೆ ಜಾರಿ

ಇಂದಿನಿಂದ ಏಪ್ರಿಲ್ 11 ರವರೆಗೆ ದಾವಣಗೆರೆ ಜಿಲ್ಲಾ ವ್ಯಾಪ್ತಿಯ 90 ಪರೀಕ್ಷಾ ಕೇಂದ್ರಗಳಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಯಲಿದ್ದು, ಪರೀಕ್ಷಾ ದಿನಗಳಂದು ಎಲ್ಲ ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ಪರಿಧಿ ವ್ಯಾಪ್ತಿ ಪ್ರದೇಶವನ್ನು ಸಾರ್ವಜನಿಕ ಪ್ರವೇಶಕ್ಕೆ ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿರುವ ಜೆರಾಕ್ಸ್ ಅಂಗಡಿಗಳು, ಸೈಬರ್‌ಕೆಫೆ ಮತ್ತು ಕಂಪ್ಯೂಟರ್ ಅಂಗಡಿಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚಬೇಕೆಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಆದೇಶ ಹೊರಡಿಸಿದ್ದಾರೆ.

## ನಗರದಲ್ಲಿ ಇಂದು ಬ್ರಾಹ್ಮಣ ಸಮಾಜದ ಮಹಿಳಾ ವಿಭಾಗದ ವಾರ್ಷಿಕೋತ್ಸವ

ಬ್ರಾಹ್ಮಣ ಸಮಾಜ ಮಹಿಳಾ ವಿಭಾಗದ ವಾರ್ಷಿಕೋತ್ಸವ ಹಾಗೂ ಮಹಿಳಾ ದಿನಾಚರಣೆ ಕಾರ್ಯಕ್ರಮ ಇಂದು ಸಂಜೆ 5.30 ಕ್ಕೆ ಶಂಕರ ಸಮುದಾಯ ಭವನದಲ್ಲಿ ನಡೆಯಲಿದೆ. ಬ್ರಾಹ್ಮಣ ಸಮಾಜ ಮಹಿಳಾ ವಿಭಾಗದ ಅಧ್ಯಕ್ಷರಾದ ಶ್ರೀಮತಿ ನಳಿನಾ ಅಚ್ಯುತ್ ಅಧ್ಯಕ್ಷತೆ ವಹಿಸುವರು. ಶ್ರೀಮತಿ ಆಶಾ ಆಚಾರ್ಯ ಅತಿಥಿಯಾಗಿ ಆಗಮಿಸಲಿದ್ದಾರೆ. ಇದೇ ವೇಳೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾದ ಶ್ರೀಮತಿ ಸುಶೀಲಾದೇವಿ ಆರ್. ರಾವ್ ಹಾಗೂ ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಶುಶ್ರೂಷಕಿ ಶ್ರೀಮತಿ ಶಶಿಕಲಾ ಅವರನ್ನು ಸನ್ಮಾನಿಸಲಾಗುವುದು ಎಂದು ಕಾರ್ಯದರ್ಶಿ ಶ್ರೀಮತಿ ಅಡಿಗ ತಿಳಿಸಿದ್ದಾರೆ.

## ಬ್ಯಾಂಕ್ ಉದ್ಯೋಗಿಗಳ ಪ್ರತಿಭಟನೆ

ನವದೆಹಲಿ, ಮಾ. 27 – ಬ್ಯಾಂಕ್ ಉದ್ಯೋಗಿಗಳ ಒಂದು ವರ್ಗ ದೇಶಾದ್ಯಂತ 2 ದಿನಗಳ ಕಾಲ ಪ್ರತಿಭಟನೆ ನಡೆಸಲಿದೆ. ಈ ಹಿನ್ನೆಲೆಯಲ್ಲಿ ಸೋಮವಾರ, ಮಂಗಳವಾರ ಬ್ಯಾಂಕಿಂಗ್ ಸೇವೆಯಲ್ಲಿ ಭಾಗಶಃ ವ್ಯತ್ಯಯವಾಗಲಿದೆ. ಹಲವಾರು ಕಾರ್ಮಿಕ ಒಕ್ಕೂಟಗಳು ಸೋಮವಾರ ಹಾಗೂ ಮಂಗಳವಾರ ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳ ವಿರುದ್ಧ ಪ್ರತಿಭಟನೆ ನಡೆಸಲಿವೆ. ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸಬೇಕು, ಯಾವುದೇ ರೀತಿಯ ಖಾಸಗೀಕರಣ ಮಾಡಬಾರದು, ನ್ಯಾಷನಲ್ ಮಾನಿಟೈಸೇಷನ್ ಪೈಪ್‌ಲೈನ್ ರದ್ದುಗೊಳಿಸಬೇಕು, ಉದ್ಯೋಗ ಖಾತ್ರಿ ಅನುದಾನ ಹೆಚ್ಚಿಸಬೇಕು ಎಂಬುದೂ ಸೇರಿದಂತೆ ಹಲವಾರು ಬೇಡಿಕೆಗಳನ್ನು ಮುಂದಿಟ್ಟುಕೊಂಡು ಮುಷ್ಕರ ನಡೆಸಲಾಗುತ್ತಿದೆ.

## ಇಂದು ಅಂಚೆ ನೌಕರರ ಮುಷ್ಕರ

ಅಂಚೆ ಇಲಾಖೆ ನೌಕರರ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇಂದಿನಿಂದ ಎರಡು ದಿನಗಳ ಕಾಲ ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ ನಡೆಯಲಿದ್ದು, ಅಂತೆಯೇ ದಾವಣಗೆರೆಯ ಪೋಸ್ಟಲ್ ಜಾಯಿಂಟ್ ಕೌನ್ಸಿಲ್ ಆಫ್ ಆಕ್ಷನ್ ನೇತೃತ್ವದಲ್ಲಿ ಅಂಚೆ ಇಲಾಖೆ ನೌಕರರಿಂದ ಮುಷ್ಕರ ನಡೆಯಲಿದೆ. ಇಂದು ಆಯಾ ತಾಲ್ಲೂಕುಗಳ ಅಂಚೆ ಕಚೇರಿ ಹತ್ತಿರ ಮುಷ್ಕರ ನಡೆಯಲಿದೆ. ನಾಳೆ ಮಂಗಳವಾರ ಚಿತ್ರದುರ್ಗ ಮುಖ್ಯ ಅಂಚೆ ಕಚೇರಿಯಿಂದ ಬೆಳಿಗ್ಗೆ 10 ಗಂಟೆಗೆ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ಸಂಘಟನೆ ತಿಳಿಸಿದೆ.


# ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ

ನಂ.657/1ಎ, ಮಂಡಿಪೇಟೆ, ದಾವಣಗೆರೆ - 577 001.
ದೂರವಾಣಿ : 08192-271537/234330

"ಕನಕ ಸಿರಿ" ವಿಶೇಷ ಬಾಂಡ್

**ಬ್ಯಾಂಕಿನ ರಜತ ಮಹೋತ್ಸವದ ಪ್ರಯುಕ್ತ "ಕನಕ ಸಿರಿ"** ವಿಶೇಷ ಬಾಂಡನ್ನು ಆಕರ್ಷಕ ಠೇವಣಿ ಬಡ್ಡಿ ನೀಡುವುದರ ಮೂಲಕ ಮತ್ತು ವಿಶೇಷವಾಗಿ **ದಿನದರ್ಶಿಕೆ-2022** ಬಿಡುಗಡೆ ಮಾಡಿದ್ದು, ನಮ್ಮ ಬ್ಯಾಂಕಿನ ಷೇರುದಾರರು ಗ್ರಾಹಕರು ಇದರ ಲಾಭವನ್ನು ಪಡೆಯುವ ಮೂಲಕ ಮತ್ತು ಬ್ಯಾಂಕಿನ ವ್ಯವಹಾರದಲ್ಲಿ ಭಾಗವಹಿಸಿ, ಪ್ರೋತ್ಸಾಹ ನೀಡಲು ಈ ಮೂಲಕ ವಿನಂತಿಸಿಕೊಳ್ಳುತ್ತೇವೆ.

2020-2021 ಸಾಲಿಗೆ ಲಾಭಾಂಶವನ್ನು ಸಹ ವಿತರಣೆ ಮಾಡಲಾಗುತ್ತಿದೆ. ಸದಸ್ಯರು ಗುರುತಿನ ಚೀಟಿ ತೋರಿಸಿ ಲಾಭಾಂಶ ಪಡೆಯಬಹುದಾಗಿದೆ ಮತ್ತು ಗುರುತಿನ ಚೀಟಿ ಇಲ್ಲದೇ ಇರುವವರು ಇತ್ತೀಚಿನ 3 ಭಾವಚಿತ್ರಗಳನ್ನು ತಂದು ಗುರುತಿನ ಚೀಟಿ ಮತ್ತು ಲಾಭಾಂಶ ಪಡೆಯಬಹುದಾಗಿದೆ.

**ಲೋಕಿಕೆರೆ ಸಿದ್ದಪ್ಪ**
ಅಧ್ಯಕ್ಷರು
ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿ.,

**ಶ್ರೀಮತಿ ಕೆ.ಜಿ. ತಾಯಮ್ಮ**
ಉಪಾಧ್ಯಕ್ಷರು
ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿ.,

**ಬಿ.ಎಲ್. ಗೌಡ**
ವ್ಯವಸ್ಥಾಪಕರು
ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿ.,


## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಈ ಕೆಳಕಂಡ ಸ್ಥಿರ ಸೊತ್ತು ನಿವೇಶನವನ್ನು ನನ್ನ ಕಕ್ಷಿಗಾರ ಸ್ವತ್ತಿನ ಮಾಲೀಕರಾದ **ಶ್ರೀ ಎಂ.ಎಸ್. ನಾಗರಾಜಯ್ಯ ಬಿನ್ ಸಿದ್ದರಾಮಯ್ಯ, ಕಲ್ಲೇಶ್ವರ ಎಲೈಟ್ ಅಪಾರ್ಟ್‌ಮೆಂಟ್, ರಂಗನಾಥ ಬಡಾವಣೆ, ದಾವಣಗೆರೆ ಸಿಟಿ** ಇವರಿಂದ ಖರೀದಿಸಲು ಇಚ್ಚಿಸಿರುತ್ತಾರೆ.

ಸದರಿ ಷೆಡ್ಯೂಲ್ ಸೊತ್ತನ್ನು ನನ್ನ ಕಕ್ಷಿಗಾರರು ಮೇಲ್ಕಂಡ **ಶ್ರೀ ಎಂ.ಎಸ್. ನಾಗರಾಜಯ್ಯ ಬಿನ್ ಸಿದ್ದರಾಮಯ್ಯ ಕಲ್ಲೇಶ್ವರ ಎಲೈಟ್ ಅಪಾರ್ಟ್‌ಮೆಂಟ್, ರಂಗನಾಥ ಬಡಾವಣೆ, ದಾವಣಗೆರೆ ಸಿಟಿ** ಇವರಿಂದ ಖರೀದಿಸುವ ಬಗ್ಗೆ ಯಾರದಾದರೂ, ಯಾವುದೇ ರೀತಿಯ ತಂಟೆ ತಕರಾರು, ವ್ಯಾಜ್ಯ ಅಥವಾ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ 15 ದಿವಸಗಳ ಒಳಗಾಗಿ ಈ ಕೆಳಕಂಡವರಿಗೆ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು ಸದರಿ 15 ದಿವಸಗಳ ಅವಧಿ ಮೀರಿ ಬರುವ ಯಾವುದೇ ತಂಟೆ, ತಕರಾರು, ವ್ಯಾಜ್ಯ ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸದರಿ 15 ದಿವಸಗಳ ಅವಧಿ ನಂತರ ನನ್ನ ಕಕ್ಷಿಗಾರರು ಮೇಲ್ಕಂಡ **ಶ್ರೀ ಎಂ.ಎಸ್. ನಾಗರಾಜಯ್ಯ ಬಿನ್ ಸಿದ್ದರಾಮಯ್ಯ, ಕಲ್ಲೇಶ್ವರ ಎಲೈಟ್ ಅಪಾರ್ಟ್‌ಮೆಂಟ್, ರಂಗನಾಥ ಬಡಾವಣೆ, ದಾವಣಗೆರೆ ಸಿಟಿ** ಇವರಿಂದ ಷೆಡ್ಯೂಲ್ ನಿವೇಶನವನ್ನು ರಿಜಿಸ್ಟರ್ಡ್ ಕ್ರಯ ಪತ್ರ ಮಾಡಿಸಿಕೊಳ್ಳುವುದರ ಮೂಲಕ ಸೊತ್ತಿನ ಸ್ವಾಧೀನ ಹೊಂದುವರು.

ಸದರಿ ಅವಧಿ ಮೀರಿ ಬರಬಹುದಾದ ಯಾವುದೇ ತಂಟೆ, ತಕರಾರು, ವ್ಯಾಜ್ಯ ಆಕ್ಷೇಪಣೆ ವಗೈರೆಗಳು ನನ್ನ ಕಕ್ಷಿಗಾರರನ್ನು ಪ್ರತಿಬಂಧಿಸುವುದಿಲ್ಲ ಹಾಗು ನನ್ನ ಕಕ್ಷಿಗಾರರು ಸದರಿ **ಶ್ರೀ ಎಂ.ಎಸ್. ನಾಗರಾಜಯ್ಯ ಬಿನ್ ಸಿದ್ದರಾಮಯ್ಯ, ಕಲ್ಲೇಶ್ವರ ಎಲೈಟ್ ಅಪಾರ್ಟ್‌ಮೆಂಟ್, ರಂಗನಾಥ ಬಡಾವಣೆ, ದಾವಣಗೆರೆ ಸಿಟಿ** ಇವರಿಂದ ಪಡೆದುಕೊಳ್ಳುವ ಶುದ್ಧ ಕ್ರಯಪತ್ರವನ್ನು ಎಳ್ಳಷ್ಟೂ ಬಾಧಿಸುವುದಿಲ್ಲ ತಿಳಿಯುವುದು.

### ಷೆಡ್ಯೂಲ್

ದಾವಣಗೆರೆ ತಾಲ್ಲೂಕು, ಹಿರಿಯ ಉಪನೋಂದಣಾಧಿಕಾರಿಗಳವರ ಕಛೇರಿಯ ವ್ಯಾಪ್ತಿಗೆ ಒಳಪಟ್ಟ, ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ, ಶ್ಯಾಬನೂರು ಗ್ರಾಮದ ರಿ. ಸರ್ವೆ ನಂ. 177/3 ವಿಸ್ತೀರ್ಣ 00.30 ಗುಂಟೆವುಳ್ಳ ಪೂರಾ ಜಮೀನು ಈ ಹಿಂದೆ ವಾಸೋಪಯೋಗಕ್ಕಾಗಿ ದಾವಣಗೆರೆ ಜಿಲ್ಲಾಧಿಕಾರಿಗಳವರಿಂದ ಆರ್ಡರ್ ನಂ. ಎಎಲ್‌ಎನ್/ಸಕಾಲ/ಸಿಆರ್/19/14-15, ನಂ. ಎಎಲ್‌ಎನ್/ಸಕಾಲ/ಎಸ್‌ಆರ್/107/14-15, ದಿನಾಂಕ 26.08.2014ರ ಆರ್ಡರ್ ಪ್ರಕಾರ ಅಲಿನೇಷನ್ ಮಂಜೂರಾಗಿದ್ದೂ ನಂತರ ಸದರಿ ಪ್ರದೇಶದಲ್ಲಿ ವಿಂಗಡಿಸಿರುವ ಸೈಟುಗಳು ಹಾಗೂ ಇದಕ್ಕೆ ಲಗತ್ತಾದ ರಿ.ಸರ್ವೆ ನಂ.177/1 ಮತ್ತು 177/2 ಉಳ್ಳ ಅಲಿನೇಷನ್ ಆಗಿರುವ ಜಮೀನುಗಳನ್ನು ಸಹ ಒಂದುಗೂಡಿಸಿ ಒಟ್ಟು ವಿಸ್ತೀರ್ಣ ಎಕರೆ 2, ಗುಂಟೆ 37 ವುಳ್ಳ ಪೂರಾ ಪ್ರದೇಶದಲ್ಲಿ ವಿಂಗಡಿಸಿರುವ ಸೈಟುಗಳ ಬಗ್ಗೆ ತಯಾರು ಮಾಡಿದ ಕಂಬೈನ್ಡ್ ಲೇಔಟ್ ಪ್ಲಾನ್‌ನನ್ನು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ ಇವರಿಂದ ನಂ. ದಾಹನಪ್ರಾ/ಯೋವಿ/ಅಂವವಿ/471/595/598/2012-13/2679, ದಿನಾಂಕ 11.02.2015ರ ಪ್ರಕಾರ ಅಂತಿಮ ವಿನ್ಯಾಸ ಮಂಜೂರಾತಿ ಪಡೆದು, ನಂತರ ಸದರಿ ಪ್ಲಾನ್‌ನಲ್ಲಿ ಕಂಡ ನಿವೇಶನಗಳಿಗೆ ದಿನಾಂಕ 2.7.2015ರಂದು ದಾವಣಗೆರೆ ಮಹಾನಗರ ಪಾಲಿಕೆಯಿಂದ ಡೋರ್ ನಂಬರ್ ಹಾಗೂ ಖಾತೆ ಸಹ ದಾಖಲು ಮಾಡಿಸಿರುವ ಸೈಟಗಳ ಪೈಕಿ ರಿ. ಸರ್ವೆ ನಂ.177/3 ರಲ್ಲಿನ ಬನಶಂಕರಿ ಬಡಾವಣೆ ಹತ್ತಿರ ಬರತಕ್ಕ ಸೈಟಿನ ವಿವರ:

| ಸೈಟ್ ನಂಬರ್ | ಮಹಾನಗರ ಪಾಲಿಕೆ ಚಾಲ್ತಿ ಡೋರ್ ನಂಬರ್ | ಅಳತೆ (ಮೀಟರ್‌ಗಳಲ್ಲಿ) | ಅಳತೆ (ಅಡಿಗಳಲ್ಲಿ) |
|---|---|---|---|
| 9 | 3377/9 | 9.14 x 12.00 | 30x39.50 |

ಈ ರೀತಿ ಉಳ್ಳ ಮೇಲ್ಕಂಡ ನಿವೇಶನಕ್ಕೆ ಚಕ್ಕುಬಂದಿ: ಪೂರ್ವಕ್ಕೆ :ರಿ. ಸರ್ವೆ ನಂ. 177/4ರ ಸೊತ್ತು, ಪಶ್ಚಿಮಕ್ಕೆ : ರಸ್ತೆ ಉತ್ತರಕ್ಕೆ : ಸೈಟ್ ನಂ. 8 ದಕ್ಷಿಣಕ್ಕೆ : ಸೈಟ್ ನಂ. 10 ಈ ಮಧ್ಯದ ಒಂದು ಖಾಲಿ ನಿವೇಶನವನ್ನು ನನ್ನ ಕಕ್ಷಿದಾರರು ಖರೀದಿಸುವವರಿದ್ದಾರೆ.

ದಾವಣಗೆರೆ
ದಿನಾಂಕ : 27.03.2022

**ಮಲ್ಲಿಕಾರ್ಜುನ ಕಣವಿ**, ಬಿ.ಎ. ಎಲ್‌ಎಲ್.ಎಂ. ವಕೀಲರು,
ನಂ.5 & 6, 1ನೇ ಅಂತಸ್ತು, ದಾವಣಗೆರೆ ಆಟೋಮೊಬೈಲ್ ಸೊಸೈಟಿ ಕಾಂಪ್ಲೆಕ್ಸ್, ಹೋಟೆಲ್ ಪೂಜಾ ಇಂಟರ್ ನ್ಯಾಷನಲ್ ಎದುರು,
ಪಿ.ಬಿ. ರಸ್ತೆ, ದಾವಣಗೆರೆ-577006

# ರಜತ (ಬೆಳ್ಳಿ) ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು

25th ANNIVERSARY



ದಾಂಪತ್ಯ ಜೀವನದ 25 ಅರ್ಥಪೂರ್ಣ ವರ್ಷಗಳನ್ನು ಪೂರೈಸಿದ

## ಶ್ರೀ ಕೆ.ಸಿ. ಷಡಾಕ್ಷರಿ ಮತ್ತು ಶ್ರೀಮತಿ ಕೆ.ಎಸ್. ಉಷಾ

ಜೋಡಿಗೆ ವೈವಾಹಿಕ ರಜತ ಮಹೋತ್ಸವದ

## ಹಾರ್ದಿಕ ಅಭಿನಂದನೆಗಳು....



**ಶುಭ ಕೋರುವವರು :**

**ಬಿಎಸ್‌ಸಿ ಕುಟುಂಬದವರು, ದಾವಣಗೆರೆ.**



ಶ್ರೀಮತಿ ಗಿರಿಜಮ್ಮ
ಶ್ರೀ ಬಿ.ಎಸ್. ಉಮಾಪತಿ

ಶ್ರೀಮತಿ ಪೂರ್ಣಿಮ
ಶ್ರೀ ಬಿ.ಎಸ್. ಚಂದ್ರಶೇಖರ್




ಶ್ರೀಮತಿ ದೀಪಾ ಮತ್ತು ಬಿ.ಎಸ್. ಶಿವಕುಮಾರ್




ಜಿ.ಡಿ. ಪ್ರಕಾಶ್, ಮಹಾನಗರ ಪಾಲಿಕೆ, ಕಾರ್ಪೋರೇಟರ್ | ವಿನಾಯಕ ಪೈಲ್ವಾನ್, ಮಹಾನಗರ ಪಾಲಿಕೆ, ಕಾರ್ಪೋರೇಟರ್ | ಇಟ್ಟುಗುಡಿ ಮಂಜುನಾಥ್, ಮಹಾನಗರ ಪಾಲಿಕೆ, ಕಾರ್ಪೋರೇಟರ್ | ಶ್ರೀಮತಿ ಸುಧಾ ಇ. ಮಂಜುನಾಥ್, ಮಹಾನಗರ ಪಾಲಿಕೆ, ಕಾರ್ಪೋರೇಟರ್ | ಶ್ರೀಮತಿ ಡಿ.ಎಲ್. ಅನಿತಾ | ಶ್ರೀಮತಿ ಎಸ್. ವೀಣಾ | ಶ್ರೀಮತಿ ತನುಜ ಎ.



ಇ. ಬಸವರಾಜ್ | ಡೆಂಟಲ್ ರಾಜ್‌ಕುಮಾರ್ | ಇ. ಹಾಲಪ್ಪ ಗುರುಸ್ವಾಮಿ | ಎಸ್.ಎಂ. ಸಿದ್ದೇಶಿ, ಎಲೆಕ್ಟ್ರಿಕಲ್ | ಜಿ.ಎಂ. ಅಜಯ್, ಆಟೋಮೊಬೈಲ್ಸ್ | ಪ್ರವೀಣ್‌ಕುಮಾರ್ ಬಿ. | ಆನಂದ್ ರಾಯ್ಕರ್



ನಿರಂಜನ್ ವಿ. ರಾಯ್ಕರ್ | ಟಿ. ಉಮೇಶ್ | ಶಾಂತಮೂರ್ತಿ | STD ಮಂಜಣ್ಣ, ಗಾಂಧಿನಗರ | ರೈಲ್ವೆ ಮಂಜಾಚಾರಿ ಎ. | ಕೆ.ಸಿ. ಉಮೇಶ್ | ಶಿವಾಜಿ ರಾವ್ ಚನ್ನಗಿರಿ



ಇ. ತಿಪ್ಪಣ್ಣ ಕುಂಬಾರ | ಓಂಕಾರಪ್ಪ ಜಿ.ಸಿ. | ಎ.ಸಿ. ಸತೀಶ್ | ಪರಮೇಶ್ | ಅಶೋಕ್ ಕುಬಸದ್ | ಜಗದೀಶ್ ಎಸ್.ಕೆ. | ವಿಜಯ್‌ಕುಮಾರ್ ಕೋಟಿ



ಸಾಯಿ ಸುದರ್ಶನ್, ಪ್ರಸನ್ನ

**ಶ್ರೀಮತಿ ಜಯಮ್ಮ ಶ್ರೀ ಗುರುಪಾದಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ಕುದರಿ ವಂಶಸ್ಥರು, ದಾವಣಗೆರೆ.**